ಅಪರಂಜಿ

ಸೆಪ್ಟೆಂಬರ್ 2003

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವಕುಮಾರ್

ಶ್ರೀನಿವಾಸ ವೈದ್ಯ

ಕುಂ. ವೀರಭದ್ರಪ್ಪ

ಪ್ರಕಾಶ್

ಬೇಲೂರು ರಾಮಮೂರ್ತಿ

ಶಿವು

ಎನ್. ಪ್ರಕಾಶ

ರಾಮನ್

ಹೆಚ್. ಗೋಪಾಲಕೃಷ್ಣ

ಆನಂದ

ನೀರಗುಂದ ಕೇಶವಮೂರ್ತಿರಾವ್

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕ:
ಶಿವಕುಮಾರ್

ಉಪ ಸಂಪಾದಕ:
ಬೇಲೂರು ರಾಮಮೂರ್ತಿ

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ ರೂ. 60
ಹತ್ತು ವರ್ಷದ ಚಂದಾ ರೂ. 500

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ ಮಲ್ಲೇಶ್ವರಂ, ಬೆಂಗಳೂರು - 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 20 ಸೆಪ್ಟೆಂಬರ್ - 2003 ಸಂಚಿಕೆ - 12

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು - 27



○ ಪ್ರಕಾಶ್

ಕರ್ನಾಟಕ ನೀರಾವರಿ ತಿದ್ದುಪಡಿ ಮಸೂದೆ ಅಂಗೀಕಾರ
- ಸುದ್ದಿ

ನೀರಾ - Worry?!

★★★

ಭಿನ್ನಾಭಿಪ್ರಾಯ ತೊರೆಯಲು ಪೂಜಾರಿ ಕರೆ
- ಪತ್ರಿಕೆ

ದೇವರು ವರ ಕೊಡಬೇಕಲ್ಲ??

★★★

ಜಗತ್ತಿನ 10 ಅನಕ್ಷರಸ್ಥರಲ್ಲಿ ಐದು ಜನ ಭಾರತೀಯರು
- ಸುದ್ದಿ

ಆದರೆ ಅವರಿಗೆ ಇದನ್ನ ಓದುಕ್ಕಾಗಲ್ಲವಲ್ಲ?!

★★★

'ಇನ್ನೊಂದು ಅವಧಿಗೆ ಅಧಿಕಾರ ಬೇಡ'
- ಕಾಲಿನ್ ಪೊವೆಲ್

ಇದೇ ಸುಬುದ್ಧಿ ಬುಷ್‌ಗೆ ಬರಲಿ!!

★★★

ಎರಡು ಗ್ಯಾಸ್ ಸಿಲಿಂಡರ್‌ಗಳನ್ನು ತಲೆ ಕೂದಲಿನಿಂದ ಎತ್ತಿ ಹಿಡಿದ ಭೂತ
- ಸುದ್ದಿ

ಅವನಿಗೆ ಎರಡೂ ಒಟ್ಟಿಗೆ ಸಿಕ್ಕಿದ್ದು ಆಶ್ಚರ್ಯ?

★★★

''ಭ್ರಷ್ಟಾಚಾರವೆಂಬ ಬ್ರಹ್ಮರಾಕ್ಷಸ''

- ಶೀರ್ಷಿಕೆ

ನಾವು ಅಷ್ಟು ಭಾರಿ ಅಲ್ಲ ಅಂತ ಬ್ರಹ್ಮ ರಾಕ್ಷಸರ ಸಂಸ್ಥೆ ಹೇಳಿಕೆ ಕೊಟ್ಟಿತಂತೆ!!

★★★


'ಪೆಪ್ಸಿ, ಕೋಲಾ, ಗಲಭೆ'

- ಸುದ್ದಿ

ಅಮೆರಿಕದ ಎಂಬಿಸಿಯಲ್ಲಿ ಭಾರತದ ಡ್ರಿಂಕ್ಸ್ ಉಪಯೋಗವೋ, ಅಮೆರಿಕಾದ್ದೋ ಎಂದು ನೋಡಿದರೆ ಸತ್ಯ ಸುಲಭವಾಗಿ ಗೊತ್ತಾಗುತ್ತೆ!!

★★★

ಇಂಟರ್‌ನೆಟ್ ಕೃಪೆ



ಮನೇಯಿಂದಾನೇ ಕೆಲಸ ಮಾಡ್ಬೋದು, ಛಾನ್ಸ್ ಬಿಡಬೇಡಿ ಅಂದ್ಯಲ್ಲಾ, ಈಗ ನೋಡು!

ನಮ್ಮ ನಿಮ್ಮಲ್ಲಿ

ಮಳೆ ಸಣ್ಣಗೆ ಹನಿಯುಕ್ಕೆ ಪ್ರಾರಂಭಿಸಿತ್ತು. ಬೇಗ ಹೋಗೋಣ ಅಂದುಕೊಂಡು ಆಟೋ ಹತ್ತಿದೆ. ರಿಚ್ಮಂಡ್ ಸರ್ಕಲ್ ದಾಟಿ ಕಂಠೀರವ ಸ್ಟೇಡಿಯಂ ಮುಂದೆ ಬರೋ ಹೊತ್ತಿಗೆ ಮಳೆ ಭರ್ರ್ರೋ ಎಂದು ಹೊಡೆಯಹತ್ತಿತು. ಆಟೋದ ಎರಡೂ ಬದಿಗಳಿಂದ ನನಗೆ ಇರುಚಲಿನ ಸ್ನಾನ. ರಸ್ತೆ ಪಕ್ಕದ ಕಾಲುಹಾದಿಯ ಕಲ್ಲುಸಾಲಿಗೆ ಒತ್ತಿದಂತೆ ಪುಟ್ಟ ನದಿಗಳು ಹರಿಯತೊಡಗಿದವು. ಮಳೆ ನೋಡಿ ಆಟೋ ಡ್ರೈವರ್ ರಷೀದನಿಗೆ ಎಂದಿಲ್ಲದ ಆನಂದ. ''ಬೆಂಗಳೂರಿನಲ್ಲಿ ಹೀಗೆ ರಸ್ತೆ ಬದಿ ನೀರು ಹರಿಯೋದು ಕಂಡು ಎಷ್ಟು ಕಾಲ ಆಯ್ತು ಸಾರ್'' ಎನ್ನುತ್ತಾ, ಆಟೋವನ್ನು ರಸ್ತೆ ಪಕ್ಕಕ್ಕೆ ನಿಲ್ಲಿಸಿ, ಇರಿಚಲಿನಿಂದ ನನ್ನನ್ನು ರಕ್ಷಿಸಲು ಹರಿದ ಸಿಮೆಂಟ್ ಚೀಲವೊಂದನ್ನು ಆಟೋವಿನ ಬಲಗಡೆಗೆ ಕಟ್ಟಲು ಉದ್ಯುಕ್ತನಾದ. ಈ ಹಂಗಾಮಿ ರಕ್ಷಣೆ ಸಿದ್ಧವಾದ ನಂತರ ಆಟೋ ಸ್ಟಾರ್ಟ್ ಮಾಡಿ ಪುನಃ ಹೊರಟೆವು. ಏನು ಆಶ್ಚರ್ಯ ಅಂತೀರಾ. ಬಸವ ಭವನದ ಹತ್ತಿರ ಬರೋ ಹೊತ್ತಿಗೆ ಒಂದು ಹನಿ ಮಳೆ ಇಲ್ಲ. ಟೊರಾಂಟೋದಿಂದ ಬಂದಿದ್ದ ಮಿತ್ರ ''ಸಿಮ್'' ಮೂರ್ತಿಯವರೊಂದಿಗಿನ ಭೇಟಿ ಈ ಆಟೋ ಯಾತ್ರೆಯ ಉದ್ದೇಶ. ''ಇದೇನು ಸಿಮ್ ಅನ್ನೋ ಹೊಸ ಹೆಸರು?'' ಅಂತ ಅವರನ್ನ ಕೇಳಿದಾಗ, ''ಬಿಳಿಯರ ನಾಲಿಗೆಯಲ್ಲಿ ನರಸಿಂಹ ಅನ್ನೋ ಪದ ಅಷ್ಟು ಚೆನ್ನಾಗಿ ಹೊರಳೋದಿಲ್ಲ. ಅವರೇ ನಮಗೆ ಅನ್ನದಾತರಾದ್ದರಿಂದ ಅವರ ಉಚ್ಚಾರಣೆಗೆ ಸರಿಹೊಂದೋ ಹಾಗೆ ಹೀಗೆ ಬದಲಿಸಿಕೊಂಡೆ'' ಅಂದರು ಮೂರ್ತಿ. ಸುಮಾರು ನಾಲ್ಕು ದಶಕಗಳಷ್ಟು ಕಾಲ ಬಿಳಿಯರೊಂದಿಗೆ ಇದ್ದು ಆ ಜನಾಂಗದ ಗುಣಾವಗುಣಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದಾರೆ ಅನ್ನಿಸಿತು, ಅವರೊಂದಿಗೆ ಮಾತನಾಡಿದಾಗ. ಅದೊಂದು ಅವಿಸ್ಮರಣೀಯ ಸಂಜೆ. ಅಂದಿನ ಮಾತುಕತೆಗಳು ಸ್ವಾರಸ್ಯಕರವೆನ್ನಿಸಿದುದರಿಂದ, ಅವನ್ನು ಪ್ರತ್ಯೇಕವಾಗಿ ದಾಖಲಿಸಿದ್ದೇನೆ.


ಕಳೆದ ತಿಂಗಳು ಪ್ರಕಟವಾದ ''ನಾವಿದ್ದದದ್ದು'' ಬರಹದೊಂದಿಗೆ ಶ್ರೀಯುತ ಎಂ. ಭಕ್ತವತ್ಸಲರ (ಭಕ್ತ) ಲೇಖನಮಾಲೆ ಸದ್ಯಕ್ಕೆ ಮುಕ್ತಾಯಗೊಂಡಿದೆ. ಅವರ ಇಂಗ್ಲೀಷ್ ಲೇಖನಗಳನ್ನು ನಾನು ಕನ್ನಡಿಸಲು ನಿರ್ಧರಿಸಿದಾಗ ಅವರಿಗೆ ಸ್ವಾಭಾವಿಕವಾಗಿಯೇ ಅಳುಕು, ಸಂದೇಹ ಇವುಗಳೆಲ್ಲಾ ಧಾರಾಳವಾಗಿದ್ದವು. ಆದರೂ ಸ್ನೇಹಕ್ಕೆ ಕಟ್ಟು ಬಿದ್ದು, (ಅಥವಾ ದಾಕ್ಷಿಣ್ಯಕ್ಕೆ ಎಂದು ಬೇಕಾದರೂ ಹೇಳಬಹುದು!) ತಮ್ಮ ಲೇಖನಗಳ ಭಾಷಾಂತರಕ್ಕೆ ಅವರು ಒಪ್ಪಿದ್ದರು. ಅನೇಕ ಓದುಗರಿಗೆ ಈ ಬರಹಗಳು ಭಾಷಾಂತರಗಳೆಂದು ತಿಳಿಯದಿದ್ದುದು ಭಾಷಾಂತರದ ಒಂದು ಯಶಸ್ಸು ಎಂದು ನಾನು ಭಾವಿಸಿದ್ದೇನೆ. ಒಟ್ಟಿನಲ್ಲಿ ತಮ್ಮ ಇಂಗ್ಲೀಷ್ ಲೇಖನಗಳನ್ನು ಅಪರಂಜಿಯಲ್ಲಿ ಉಪಯೋಗಿಸಲು ಅನುಮತಿ ನೀಡಿ ನಮ್ಮ ಓದುಗರಿಗೆ ಮುದ ನೀಡಲು ಕಾರಣರಾಗಿದ್ದಕ್ಕೆ ಭಕ್ತರಿಗೆ ಅಪರಂಜಿಯ ತುಂಬು ಹೃದಯದ ನಮನ.


ತಮ್ಮ ''ಮನೋನಂದನ'' ಪುಸ್ತಕದ ಕೊನೆಯ ಹಲವು ಸಾಲುಗಳಲ್ಲಿ ರಾ.ಶಿ. ಹೀಗೆ ಬರೆಯುತ್ತಾರೆ. ''ರೋಗಿಯ ಬೇನೆಯನ್ನು ತಾನೇ ಅನುಭವಿಸಿದಂತೆ ಆಗಿ, ಅನುಕಂಪ

ತುಂಬಿ ಆತ ಚಿಕಿತ್ಸೆ ಮಾಡಿದರೆ, ಆತ ದಿಟವಾಗಿಯೂ ರೋಗಿಗಳ ಸ್ನೇಹಿತ, ಮಾರ್ಗದರ್ಶಿ ಮತ್ತು ತಾತ್ವಿಕ ಗುರುವಾಗುತ್ತಾನೆ. ಕಾಲಾನುಕಾಲದಿಂದ ಈ ಧ್ಯೇಯವೇ ವೈದ್ಯರಿಗೆ ಬಾಳಬೆಳಕಾಗಿರುವುದು. ಮುಂದೆಯೂ ಎಂದೆಂದಿಗೂ ಬಾಳಬೆಳಕಾಗಿ ಇರಬೇಕಾದುದು.'' ರಾ.ಶಿ.ಯವರ ಹಾಸ್ಯ ಪರಿಚಯ ಇರುವಂತೆ ಅವರ ಈ ವೈದ್ಯಕೀಯ ಮುಖ ಜನರಿಗೆ ಹೆಚ್ಚು ಪರಿಚಯ ಇಲ್ಲದಿರುವುದು ಸತ್ಯದ ಸಂಗತಿ. ಈ ಕೊರತೆಯನ್ನು ನೀಗಲು, ಅವರೊಂದಿಗೆ ವೈದ್ಯಕೀಯ ವೃತ್ತಿಯಲ್ಲಿ ನಿಕಟವಾಗಿ ಸಂಪರ್ಕ ಹೊಂದಿದ್ದ ಡಾ|| ಓಂಪ್ರಕಾಶ್‌ರವರು ಒಂದು ಲೇಖನಮಾಲೆಯನ್ನು ಈ ಸಂಚಿಕೆಯಿಂದ ನೀಡಲು ಒಪ್ಪಿದ್ದಾರೆ. ಅವರಿಗೆ ಅಪರಂಜಿಯ ಕೃತಜ್ಞತೆಗಳು.

ಸೆಪ್ಟೆಂಬರ್ ಹದಿನಾಲ್ಕರಂದು ಖ್ಯಾತ ನಗೆಗಾರ ಪಿ.ಜಿ. ವುಡ್ ಹೌಸ್ ಕುರಿತು ಒಂದು ಕಾರ್ಯಕ್ರಮ ಏರ್ಪಡಿಸಿದೆ. ಈ ಬಗ್ಗೆ ಒಂದು ಮಾಹಿತಿ ಜಾಹಿರಾತನ್ನು ಈ ಸಂಚಿಕೆಯಲ್ಲೇ ನೀಡಿದ್ದೇವೆ. ಸಂಪೂರ್ಣ ಕಾರ್ಯಕ್ರಮವನ್ನು ಇಂಗ್ಲೀಷಿನಲ್ಲೇ ಯೋಜಿಸಿರುವುದು, ಅಂಧ ಭಾಷಾಭಿಮಾನದ ಈ ದಿನಗಳಲ್ಲಿ ಅಪರಂಜಿಗಂತೂ ಒಂದು ಹೆಮ್ಮೆಯ ವಿಷಯ. ಹಾಸ್ಯಕ್ಕೆ, ನಗೆ ಪ್ರಜ್ಞೆಗೆ ಭಾಷೆಯ ಕಟ್ಟುಪಾಡುಗಳು ಅನಗತ್ಯ ಎಂಬ ನಿತ್ಯಸತ್ಯವನ್ನು ನಗೆ ರಸಿಕರಿಗೆ ತಲುಪಿಸುವುದೂ ಈ ಕಾರ್ಯಕ್ರಮದ ಒಂದು ಉದ್ದೇಶ. ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಒಂದು ಸಮಾರಂಭವನ್ನು ಗೆಲ್ಲಿಸಿ ಎಂದು ನಮ್ರ ಬಿನ್ನಹ.

ಶಿವಕುಮಾರ್





ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಶ್ರೀನಿವಾಸ ವೈದ್ಯ

ನಗರ ಜೀವನದ, ಸುಶಿಕ್ಷಿತ, ಮಧ್ಯಮವರ್ಗದ ಸುಖೋಷ್ಣ ಬದುಕಿನ ಏಕತಾನತೆಯ ಬರಹಗಳನ್ನೇ ಓದಿ ಓದಿ ಜಟ್ಟುಗಟ್ಟಿರುವ ಅಪರಂಜಿ ಬಳಗದ ಓದುಗರಿಗೆ, ಕುಂ. ವೀರಭದ್ರಪ್ಪನವರ "ಮಾತೇಜ್ಯೋತಿರ್ಲಿಂಗಪ್ಪಾಜಿ" ಎಂಬ ಕತೆ ಮೆಚ್ಚಿಗೆಯಾಗುವದರಲ್ಲಿ ಸಂಶಯವಿಲ್ಲ.

"ಮಾತೇ ಜ್ಯೋತಿರ್ಲಿಂಗಪ್ಪಾಜಿ"ಯನ್ನು ಓದಿ, ಬದುಕು ಹೀಗೂ ಉಂಟೇ ಎಂದು ಅಚ್ಚರಿ ಪಡುವವರು ಒಮ್ಮೆ ಬಳ್ಳಾರಿ, ಗುಲ್ಬರ್ಗಗಳ ಶ್ರೇಷ್ಠಾತಿಶ್ರೇಷ್ಠ ಅಗ್ನಿ ಭಕ್ಷಕ ಕುಗ್ರಾಮಗಳನ್ನು ಕಂಡು ಬರಬೇಕು. ಇಲ್ಲಿ ಬದುಕು ಸುಲಭವಲ್ಲ. ಪ್ರಕೃತಿ, ಸಮಾಜ, ಆಡಳಿತ ಎಲ್ಲವೂ ಒಟ್ಟಾಗಿಯೇ ಇಲ್ಲಿ ದಬ್ಬಾಳಿಕೆ ನಡೆಸುತ್ತಿವೆ; ಅಥವಾ "ಹಾಳಾಗಿ ಹೋಗಲಿ" ಎಂದು ದೂರ ಸರಿದಿವೆ!

ಇಂತಹ ಕ್ರೌರ್ಯದ ನಡುವೆಯೂ, ಅಲಕ್ಷ್ಯದ ಮಧ್ಯೆಯೂ, ಕುಂ.ವಿ.ಯವರು ನಗೆ ಹುಟ್ಟಿಸುತ್ತಾರೆ.

ಪ್ರಾದೇಶಿಕ ಭಾಷೆಯ ಆಡುಮಾತಿನಲ್ಲೇ ಬರೆಯುವದು 'ನವ್ಯ'ದ ಹೊಸ ಕೊಡುಗೆ. ಆ ಪ್ರದೇಶದವರಲ್ಲದ ಓದುಗರಿಗೆ ಇದನ್ನು, ಇಂತಹದನ್ನು ಓದುವಾಗ ತುಂಬ ಕಷ್ಟಪಡಬೇಕಾದೀತು. ಆದರೆ ಅಂತಹ ಪ್ರಯತ್ನ, ಕಷ್ಟ, ವ್ಯರ್ಥವಾಗುವುದಿಲ್ಲವೆಂಬ ಭರವಸೆಯನ್ನು ಕುಂ. ವೀರಭದ್ರಪ್ಪನವರು ಹುಟ್ಟಿಸುತ್ತಾರೆ.

ಇನ್ನು; ".... ಗ್ರಾಮದ ಹೆಂಗಳೆಯರು 'ನಿನಗಿಂಥ ದುರ್ಗತಿ ಬರಬಾರದಾಗಿತ್ತವ್ವಾ... ತಾಳಿ ಕಟ್ಟಿದ ಗಂಡನ ಬಾಯಿಂದ ಏನ್ರೀ ತಾನ್ರೀ ಅಂತ ಬಹುವಚನದಿಂದ ಮಾತಾಡಿಸ್ಕೊಂಡಂಥ ಹೆಣ್ಣು ಬದುಕಿದ್ದರೂ ಒಂದೇ, ಸತ್ತರೂ ಒಂದೇ. ಕರುಮಗೇಡಿಯಾದ ನಿಂಗೆ ಮುತ್ತೈದೆ ಸಾವು ಆದಷ್ಟೂ ಲಗೂನ ಬರಲೆವ್ವ'..." ಎಂಬ ಕತೆಯ High point ನಲ್ಲಿ ಉಕ್ಕುವ ಹಾಸ್ಯದ ಹಿಂದೆಯೇ, ಅಶಿಕ್ಷಿತ ಗ್ರಾಮ್ಯದ ಕರುಣೆಯೇ ಅಡಗಿದಂತೆನಿಸುವುದಿಲ್ಲವೇ?

ಹಳ್ಳಿಯ ಬದುಕಿನ ಅನುಭವವೇ ಇಲ್ಲದ, ತುಸು ಗಟ್ಟಿ ಹಾಸ್ಯಕ್ಕೆ ಬೆಚ್ಚಿ ಬೀಳುವ ನಮ್ಮಂತಹ ಇಂಗ್ಲೀಷು ಓದಿದ ನಾಗರಿಕರಿಗೆ, ಇಲ್ಲಿನ ಹಾಸ್ಯ ತುಸು ವಿಚಿತ್ರವೆನಿಸೀತು. ಇನ್ನೂ ಹಲ ಕೆಲವು ಪುಣ್ಯ ಜೀವಿಗಳಿಗೆ 'ಅಸಭ್ಯ'ವೂ ಎನಿಸಬಹುದೇನೋ? ಅಂತವರಿಗೊಂದು ಮಾತು

"ನ ಪ್ರಾಪ್ನುವಂತಿ ಯತಯೋ ರುಚಿತೇನ ಮೋಕ್ಷಂ।
ಸ್ವರ್ಗಾಯತಿಂ ನ ಪರಿಹಾಸ ಕಥಾ ರುಣದ್ಧಿ॥"
(ಯತಿಗಳು ಮೋಕ್ಷವನ್ನು ಪಡೆಯುವದು ಗೋಳಾಟದಿಂದಲ್ಲ;
ಸ್ವರ್ಗದ ಬರುವಿಕೆಯನ್ನು ಹಾಸ್ಯ ಪ್ರಸಂಗವು ತಡೆದು ನಿಲ್ಲಿಸುವದಿಲ್ಲ)

ಮಾತೇ ಜೋತಿರ್ಲಿಂಗಪ್ಪಾಜಿ

– ಕುಂ. ವೀರಭದ್ರಪ್ಪ

ಮೂಲಿ ಮನೆ ಮಾತೇ ಜೋತಿರ್ಲಿಂಗಪ್ಪನವರು ಅಪ್ಪಟ ಸಜ್ಜನರಾಗಿರುವರೆಂಬ ಸಂಗತಿ ಸದರೀ ಗ್ರಾಮದೊಳಗೆ ಕಳೆದ ವಾರದಿಂದ ಚಲಾವಣೆಯಲ್ಲಿದ್ದರೂ ಮೊದಮೊದಲಿಗೆ ಯಾರೂ ನಂಬಲಿಲ್ಲ. ಇದು ಅಷ್ಟು ಸುಲಭವಾಗಿ ನಂಬುವ ವಿಷಯವೂ ಆಗಿರಲಿಲ್ಲ. ದೇವರ ಒಲುಮೆಯಿಂದ ಮೂರು ಆರಾಗಬಹುದು... ಆರು ಮೂರಾಗಬಹುದು... ಆದರೆ ಲಿಂಗಪ್ಪನವರು ಸಜ್ಜನರಾಗುವುದೆಂದರೇನು? ಇದನ್ನು ನಂಬಲಿಕ್ಕೆ ತಾವೇನು ಹುಡುಗರೇ? ಅವರು ತಾವು ಸಜ್ಜನರಾಗಿ ಗ್ರಾಮವನ್ನು ಪ್ರಪಾತಕ್ಕೆ ದೂಡಲಾರರು ಎಂದೇ ಗ್ರಾಮದ ಜನರು ಮೊನ್ನೆ ಮೊನ್ನೆ ತನಕ ನಂಬಿದ್ದರು. ಕ್ರಮೇಣ ತಮ್ಮ ನಂಬಿಕೆ ಬುಡಮೇಲಾಗಿರಬಹುದೆಂಬ ಅನುಮಾನ ಬಾರದಿರಲಿಲ್ಲ. ಇದನ್ನು ಖಾತ್ರಿ ಮಾಡಿಕೊಂಡು ಬರಲೆಂದು ಕೆಲವರು ತಮ್ಮ ತಮ್ಮ ಜೀವವನ್ನು ಅಂಗೈಯಲ್ಲಿಟ್ಟುಕೊಂಡು ಹೌದೋ ಅಲ್ಲವೋ ಎಂಬಂತೆ ಹೆಜ್ಜೆ ಇಡುತ್ತ ಹೋಗಿ ಈ ಹೆಸರಾಂತ ಮನೆ ಅಷ್ಟು ದೂರವಿದೆ ಎನ್ನುವಷ್ಟರಲ್ಲಿ ನಿಂತು, ಕಟ್ಟೆಗೆ ಅಂಡು ಅಂಟಿಸಿ ಶಿಲಾವಿಗ್ರಹದಂತೆ ಕೂತಿದ್ದ ಲಿಂಗಪ್ಪನವರನ್ನು ಪಿಳಿಪಿಳಿ ಕಣ್ಣು ಬಿಡುತ್ತ ನೋಡಿದ್ದರು. ಅವರು ಮಾನವ ಲೋಕದ ಸಕಲ ಮರ್ಮಗಳನ್ನು ಎದೆಯ ಕುಲುಮೆಯಲ್ಲಿಟ್ಟುಕೊಂಡಿರುವವರಂತೆ ಕೂತಿದ್ದರು. ಇರುವೆಯ ಹೆಜ್ಜೆ ಸಪ್ಪಳವನ್ನೂ ಗ್ರಹಿಸಬಲ್ಲ ಸೂಕ್ಷ್ಮಮತಿಯಾದ ಅವರು ಕುತೂಹಲಿಗಳ ಕಡೆ ದಿವ್ಯ ನಿರ್ಲಕ್ಷ್ಯದಿಂದ ನೋಡುತ್ತಿದ್ದರು. ಒಂದು ಮಾತಿಲ್ಲ, ಒಂದು ಕಥಿ ಇಲ್ಲ. ಅದೇ ತಾನೆ ವಲ್ಮೀಕದೊಡಲಿನಿಂದ ಒಡಮೂಡಿರುವ ಪರಮ ತಾಪಸಿಯಂತೆ ಗೋಚರಿಸುತ್ತಿರುವರು. ಅವರ ಕಣ್ಣೋಟದಲ್ಲಿ ತಿಲಗಾತ್ರದಷ್ಟಾದರೂ ವಕ್ರತೆ ಇಲ್ಲ. ಸಾವಿರ ಬಯ್ಗಳಿಗೆ ಸರಿಸಾಟಿಯಾದ ದಾರ್ಷ್ಟ್ಯತೆ ಇಲ್ಲ. ತಮ್ಮ ಫಳಾರದಂಗಡಿಯಂಥ ಶರೀರವನ್ನು ನಿರ್ಭಿಡೆಯಿಂದ ಮೂಸುತ್ತಿರುವ ನಾಯಿಗಳನ್ನು ಗದರಿಸುತ್ತಿಲ್ಲ. ತಮ್ಮ ಹೃಷಿಕೇಶಕ್ಕೆ ಸಮಾನವಾದ ತೊಡೆಯಮೇಲೆ ತಪಸ್ಸನ್ನಾರಂಭಿಸಿರುವ ಬೆಕ್ಕನ್ನು ಹೊಡೆದೋಡಿಸುತ್ತಿಲ್ಲ. ಆಪ್ಯಾಯಮಾನತೆಯಿಂದ ರೂಪುಗೊಂಡಿರುವವರಂತೆ ಕಂಗೊಳಿಸುತ್ತಿರುವವರು. ಯಾಕೆ ಹೀಗಾಗಿರುವರು ತಮ್ಮ ಗ್ರಾಮದ ಕಣ್ಮಣಿಗಳಾದ ಲಿಂಗಪ್ಪನವರು! ಅವರ ವಜ್ರಾಯುಧಕ್ಕೆ ಸರಿಸಮಾನವಾದ ನಾಲಿಗೆಗೇನಾದರೂ ಲಕ್ವಾ ಬಡಿದಿರುವುದೇ ಹೇಗೆ? ಹಾಗೇನಾದರೂ ಬಡಿದಿದ್ದಲ್ಲಿ ಮುಖದ ಒಂದು ಪಾರ್ಶ್ವ ಒಂದು ಪಕ್ಕ ವಿಕಾರವಾಗಿ ವಾಲಬೇಕಾಗಿತ್ತು. ಹಗಲೆನ್ನದೆ ಇರುಳೆನ್ನದೆ ಸಮಸ್ತ ಊರಿಗೆ ಕೇಳಿಸುವಂತೆ ಆಟಾಟೋಪಿಸಬೇಕಿದ್ದವರು ಯಾಕೆ ಮೌನ ತಪಸ್ವಿಗಳಾಗಿರುವರು? ಅವನ ಮೌನ ಅಶುಭ ಸೂಚನೆಯಂತಿರುವುದು. ಯಾರಾದರೂ ಬಂದು ಅವರ ಬಾಯಿಯಿಂದ ಬಯ್ಗಳ ಶ್ಲೋಕೋಚ್ಚಾರವಾಗುವಂತೆ ಮಾಡಿ ಪುಣ್ಯ ಕಟ್ಟಿಕೊಳ್ಳಬಾರದೆ ಎಂದವರಿವರು ಮಮ್ಮಲನೆ ಹಲುಬುತ್ತಿರುವಾಗ್ಗೆ ಅವರ ಧರ್ಮಪತ್ನಿಯಾದ ಪಾರವ್ವ

ಮನೆಯಿಂದ. ಹೊರಗೆ ಬಂದು ಹಣೆಯನ್ನು ಜಜ್ಜಿಕೊಳ್ಳುತ್ತಿರುವ ದೃಶ್ಯವೂ ಅರ್ಥಗರ್ಭಿತವಾಗಿರುವುದು. ''ಹಿಂಗೆ ಸುಮ್ಕೆ ಕೂತು ಹೆಂಡ್ರು ಮಕ್ಕಬಾಯಿಗೆ ಮಣ್ಣು ಹಾಕಬೇಕೂಂತ ಮಾಡೀಯಾ! ಮಾಡ್ಕೊಂಡ ಹೆಣ್ತೀಗೆ ನೀನೀಪಾಟಿ ಗವುರವ ಕೊಟ್ರೆ ನಾನುರ್ಲು ಹಾಕ್ಕೊಂಡು ಸಾಯೋದಷ್ಟೇ! ಒಂದು ಮಾತು ಬಯ್ಕಿ; ಬಯ್ಸಿಕೊಂತೀನಿ. ಒದಿ, ಒದಸ್ಕಂತೀನಿ... ಆದ್ರೆ... ನೀನು...'' ಇನ್ನೂ ಏನೇನೋ ಗೊಣಗಾಟ ಮುಂದುವರಿಸಿದ್ದಳಾಸಾಧ್ವಿ. ದಂಪತಿಗಳ ನಡುವೆ ವಾಗ್ವಾದ ನಡೆದಿರಬಹುದೆಂಬುದು ಸುಸ್ಪಷ್ಟ. ಅದೇನೆಂದು ಅರ್ಥವಾಗುತ್ತಿಲ್ಲ... ಜನ ಬರೋದು, ಅಷ್ಟು ದೂರದಲ್ಲಿ ನಿಂತು ಪಿಳಿ ಪಿಳಿ ನೋಡೋದು... ತಮ್ಮ ಗ್ರಾಮದ ದುರಾದೃಷ್ಟವನ್ನು ಲೆಕ್ಕಿಸುತ್ತ ಹೋಗುವುದು ಮಾಡುತ್ತಿದ್ದರು.

ಆದರೆ ಪಾರವ್ವನ ಅರಣ್ಯ ರೋಧನ ಮಾತ್ರ ಗ್ರಾಮದ ಕಿವಿಗೆಟುಕುತ್ತಿತ್ತು. ಗ್ರಾಮದ ಹೆಂಗಳೆಯರು ನಿನಗಿಂಥ ದುರ್ಗತಿ ಬರಬಾರದಾಗಿತ್ತವ್ವಾ... ತಾಳಿ ಕಟ್ಟಿದ ಗಂಡನ ಬಾಯಿಯಿಂದ ಏನ್ರೀ ತಾನ್ರಿ ಅಂತ ಬಹುವಚನದಿಂದ ಮಾತಾಡಿಸ್ಕೊಂಡಂಥ ಹೆಣ್ಣು ಬದುಕಿದ್ದರೂ ಒಂದೇ, ಸತ್ತರೂ ಒಂದೇ. ಕರುಮಗೇಡಿಯಾದ ನಿಂಗೆ ಮುತ್ತೈದೆ ಸಾವು ಆದಷ್ಟೂ ಲಗೂನ ಬರಲೆವ್ವ... ಎಂದು ಮುಂತಾಗಿ ತಮ್ಮಷ್ಟಕ್ಕೆ ತಾವೇ ಮಾತಾಡಿಕೊಳ್ಳುತ್ತಿದ್ದರು. ಆದರೆ ಮೂಲೆ ಮನೆಗೆ ಹೋಗಿ ಹೀಗೆ ಆತ್ಮಹತ್ಯೆ ಮಾಡಿಕೊ ಎಂದು ಹೇಳುವ ಧೈರ್ಯ ಮಾತ್ರ ಅವರಾರಿಗೂ ಇರಲಿಲ್ಲ. ಅವರ ಮಾತು ಕೇಳಿ ತಾನಾತ್ಮಹತ್ಯೆ ಮಾಡಿಕೊಂಡು ಮಕ್ಕಳನ್ನು ಅನಾಥರನ್ನಾಗಿ ಮಾಡುವ ಪೈಕಿ ಪಾರವ್ವ ತಾನಾಗಿರಲಿಲ್ಲ. ತನ್ನ ಗಂಡನಲ್ಲಿ ಆವೇಶ ಉಕ್ಕುವಂತೆ ಮಾಡಿ ತೃಪ್ತಿಯಾಗುವವರೆಗೆ ಬಯ್ಯಿಸಿಕೊಂಡು ಪಾವನಳಾಗಬೇಕೂಂತ ಆಕೆಯು ಮಾಡದೆ ಇರುವ ಯತ್ನ ಪ್ರಯತ್ನಗಳು ಒಂದೇ ಎರಡೇ! ಆಕೆ ತನ್ನ ಎಡಗೈಯಿಂದ ಗಂಡನ ಸ್ವಾಟಿಗೆ ಒಂದು ನೂರು ಬಾರಿಯಾದರೂ ತಿವಿದಿರಬಹುದು. ಏನೋ ತಾನೋ ಅಂತಲೂ, ಬಾಯಾಗೇನು ಕಡುಬಿಟ್ಕೊಂಡಿಯಾ... ನಿನ್ನಾಲ್ಗೇ ಸೇದಿ ಹೋಗ್ಯೆತಾ. ಎಂಬಿವೇ ಕರ್ಣ ಕಠೋರವಾದ ಮಾತುಗಳನ್ನು ಅಂದಿರಬಹುದು, ಆಡಿರಬಹುದು. ಆದರೆ ಲಿಂಗಪ್ಪನವರು ಮಾತ್ರ ಮಂದಸ್ಮಿತರಾಗಿ ಕೂತೇ ಇರುವರು. ಅದಕ್ಕೆ ಪ್ರತಿಯಾಗಿ ಅವರು ದುಸುರಾ ಮಾತಾಡಲಿಲ್ಲ. ಕೈಯನ್ನೆತ್ತಿ ಬಾಯಿ ಮುಚ್ಕಂತೀಯಾ... ಇಲ್ಲ... ನಂದು... ಎಂದು ಸಂಜ್ಞೆ ಮಾಡಿ ನುಡಿಯಲಿಲ್ಲ. ಆದರೆ ಅವರು ತಮ್ಮ ಸತೀಮಣಿಯತ್ತ ಆಪ್ಯಾಯಮಾನವಾಗಿ ನೋಡುತ್ತಿದ್ದರು. ಗ್ರಾಮ ಸುವಿಖ್ಯಾತ ಗೂರಲು ರೋಗಿಯಾಗಿದ್ದ ಅವರು ಗಳಿಗೆ ಗಳಿಗೆಗೊಮ್ಮೆ ಕೊಯ್ ಕೊಯ್ ಅಂತ ಕೆಮ್ಮುತ್ತಿದ್ದರು. ಅವರ ಕೆಮ್ಮು ಕರ್ಕಶವಾಗಿದ್ದಿರದೆ ಕರ್ಣಾನಂದಕರವಾಗಿತ್ತು. ಅದಕ್ಕೆ ಸಕಲ ರಾಗಗಳ ಸ್ಪರ್ಶವಿತ್ತು ಕೆಮ್ಮುವವರಿಗೆ ಮಾದರಿ ಪಾಠದಂತಿತ್ತು.

ಹಾಗೆ ನೋಡಿದರೆ ಪಾರವ್ವ ಎಲ್ಲ ಹೆಂಗಸರಂತೆ ಗಟ್ಟಿ ವಾಣಿಯಾಗಿರಲಿಲ್ಲ. ತನ್ನ ಗಂಡನೆದುರು ಎಂದೂ ಬಾಯಿ ಬೊಂಬಾಯಿ ಮಾಡಿ ಮಾತಾಡಿದಾಕೆಯಲ್ಲ. ಮದುವೆಯಾದ ಮುವ್ ಮುವ್ವತ್ತು ವರ್ಷಗಳಿಂದ ಗಂಡನಿಂದ ಬಯ್ಯಿಸಿಕೊಂಡೂ ಬಯ್ಯಿಸಿಕೊಂಡೂ ಆಕೆಯ ಕಿವಿಗಳು ದಡ್ಡು ಬಿದ್ದುಬಿಟ್ಟಿದ್ದವು. ಗಂಡನಿಂದ

ಒದೆಸಿಕೊಂಡೂ ಒದೆಸಿಕೊಂಡೂ ಆಕೆಯ ಶರೀರವೆಂಬುದು ಜಡ್ಡುಗಟ್ಟಿ ಹೋಗಿತ್ತು. ಲಿಂಗಪ್ಪನವರು ತಮ್ಮ ಧರ್ಮಪತ್ನಿಯನ್ನು ಬಯ್ಯಲಿಕ್ಕೆ ಒಂದು ತಾಲೀಮು ಕೋಣೆ ಎಂದು ಭಾವಿಸಿದ್ದುದೇ ಆಕೆಯ ದುಃಖಕ್ಕೆ ಕಾರಣವಾಗಿತ್ತು.

ಪ್ರಪಂಚದ ಸಮಸ್ತ ಬಯ್ಗಳ ಸಾಮ್ರಾಟರಾಗಿದ್ದಂಥ ಲಿಂಗಪ್ಪನವರು ಕಟ್ಟಿಕೊಂಡ ಹೆಂಡತಿಯನ್ನು ಬಯ್ಯದೆ ವಾರದ ಮೇಲಾಯ್ತು ಎಂಬ ಸುದ್ದಿಯ ದಾವಾನಲ ಹಬ್ಬಿ ಸದರಿ ಗ್ರಾಮವನ್ನು ತಲ್ಲಣಕ್ಕೀಡುಮಾಡಿತು. ಇದೆಂಥ ಕಾಲ ಬಂತಪ್ಪ ಎಂದು ಗ್ರಾಮಕ್ಕೆ ಗ್ರಾಮವೇ ಕೈ ಕೈ ಹಿಚುಗಿಕೊಂಡಿತು. ರಾಜ್ಯದ ಸಾಂಸ್ಕೃತಿಕ ನಕ್ಷೆಯಲ್ಲಿ ತಮ್ಮ ಗ್ರಾಮಕ್ಕೆ ಒಂದು ಅದ್ಭುತ ಸ್ಥಾನ ಕಲ್ಪಿಸಿದ ಶ್ರೇಯಸ್ಸಿಗೆ ಭಾಜನರಾಗಿರುವ ಲಿಂಗಪ್ಪಾಜಿಯವರು, ತಮ್ಮ ಅವಿರತ ಶ್ರಮದಿಂದ ಗ್ರಾಮದಲ್ಲಿ ವ್ಯಾಪಾರ ಸಾಪಾರ ಸಲೀಸಾಗಿ ನಡೆಯುವಂತೆ ಮಾಡಿದ ಗ್ರಾಮದ ನಾಕಾರು ಮಂದಿಯ ಕೈಯಲ್ಲಿ ನಾಲ್ಕು ಕಾಸು ಕುಣಿದಾಡುವಂತೆ ಮಾಡಿದ ಲಿಂಗಪ್ಪಾಜಿ ಅವರು ಬಯ್ಗಳಿಗೆ ತಿಲಾಂಜಲಿ ಕೊಟ್ಟಿರಬಹುದೆ ಎಂಬ ಅನುಮಾನ ಮೂಡಿತು. ಕಣೇಕಲ್ಲೆಂದರೆ ಮೂಲಿಮನಿ ಲಿಂಗಪ್ಪನವರು, ಮೂಲಿಮನಿ ಲಿಂಗಪ್ಪನವರೆಂದರೆ ಕಣೇಕಲ್ಲು... ಇವೆರಡರ ನಡುವಿನ ಅವಿನಾಭಾವ ಸಂಬಂಧ ಬಹು ದೊಡ್ಡದು. ಒಂದರಿಂದ ಇನ್ನೊಂದನ್ನು ಬೇರ್ಪಡಿಸುವ ಶಕ್ತಿ ಯಾವುದೂ ಇಲ್ಲ. ಸದರಿ ಗ್ರಾಮದವರು ಸುತ್ತಮುತ್ತ ಯಾವುದೇ ಊರಿಗೆ ಹೋದರೂ ಮೂಲಿಮನಿ ಲಿಂಗಪ್ಪನವರ ಊರಿನವರು ಎಂದು ಹೇಳುತ್ತಾರೆಯೇ ವಿನಃ ಕಣೇಕಲ್ಲು ಗ್ರಾಮದವರು ಎಂದು ಮಾತ್ರ ಹೇಳಲಾರರು. ಅವರ ಹೆಸರು ಹೇಳಿಕೊಂಡೇ ಪರ ಊರುಗಳಲ್ಲಿ ತಮ್ಮ ಬೇಳೆ ಬೇಯಿಸಿಕೊಂಡು ಬರುವವರಿಗೆ ಸದರಿ ಗ್ರಾಮದಲ್ಲಿ ಬರವಿಲ್ಲ. ಲಿಂಗಪ್ಪನವರನ್ನು ಬೇರ್ಪಡಿಸಿ ನೋಡಿದಲ್ಲಿ ತಮ್ಮ ಊರಲ್ಲಿ ಇರುವುದಾದರೂ ಏನು! ತಮ್ಮ ಊರಲ್ಲಿ ಏನು ಒಂದು ಕೋಟೆ ಉಂಟಾ! ಒಂದು ಉಪ್ಪರಿಗೆ ಬುರುಜು ಉಂಟಾ! ಒಂದು ಸುಂದರವಾದ ದೇವಾಲಯ ಉಂಟಾ! ನಿರ್ಗತಿಕ ಸ್ಥಿತಿಗೆ ಕನ್ನಡಿ ಹಿಡಿಯುವಂಥ ಊರಿದು ಮೊದಲೇ. ಇಂಥಪ್ಪ ಹಲವು ಬರಗಳನ್ನು, ಕುಂದು ಕೊರತೆಗಳನ್ನು ತಮ್ಮ ಆಚಾರವಿಲ್ಲದ ನಾಲಿಗೆ ಮಾತ್ರದಿಂದ ಹೋಗಲಾಡಿಸಿ ತಮ್ಮ ಗ್ರಾಮಕ್ಕೆ ಸಾಮಾಜಿಕ ಮಹತ್ವ ದಯಪಾಲಿಸಿದ ಲಿಂಗಪ್ಪನವರು ಅಪ್ಪಟ ಸಜ್ಜನರಾಗಿ ಮಾರ್ಪಟ್ಟಿರುವರೆಂಬ ಸಂಗತಿಯನ್ನು ಒಪ್ಪಿಕೊಳ್ಳಲು ಗ್ರಾಮದ ಯಾರೊಬ್ಬರೂ ಸಿದ್ಧರಿರಲಿಲ್ಲ. ಲಿಂಗಪ್ಪನವರು ಸುಸಂಸ್ಕೃತರಾದ ಪಕ್ಷದಲ್ಲಿ ತಮ್ಮ ಗ್ರಾಮದ ವರ್ತಮಾನ ಮತ್ತು ಭವಿತವ್ಯ ತೇಜೋಹೀನವಾದಂತೆಯೇ ಲೆಕ್ಕವೆಂದು ಭಾವಿಸಿದ ಅನೇಕರು ಪರಿಹಾರೋಪಾಯಗಳ ಹುಡುಕಾಟದಲ್ಲಿ ತೊಡಗಿದರು. ಬಯ್ಗಳಿಂದ ವಂಚಿತಗೊಂಡ ಗ್ರಾಮದ ಅಧಿಕಾರಿಗಳು; ಶ್ರೀಮಂತರೇ ಮೊದಲಾದ ಸಂತ್ರಸ್ತರನ್ನು ಸಂತೈಸಲು; ಅವರಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸಲು; ಅದಕ್ಕೊಂದು ಪರ್ಯಾಯ ವ್ಯವಸ್ಥೆ ರೂಪಿಸಲು ಗ್ರಾಮದ ಹಲವರು ಕಂಕಣಬದ್ಧರಾದರು, ಅಲ್ಲದೆ ಈ ದಿಶೆಯಲ್ಲಿ ಪ್ರಯತ್ನಗಳನ್ನು ಕೈಗೊಂಡರೂ ಕೂಡ. ಆದರೆ ಸಂತ್ರಸ್ತರು ತಮ್ಮನ್ನು ಬಯ್ದರೆ ಲಿಂಗಪ್ಪನವರೇ ಬಯ್ಯಬೇಕೆಂದು ಪಟ್ಟು ಹಿಡಿದು ಪರ್ಯಾಯ ವ್ಯವಸ್ಥೆಯನ್ನು ಖಡಾಖಂಡಿತವಾಗಿ ನಿರಾಕರಿಸಿದರು.

ಈ ವಸ್ತು ಸ್ಥಿತಿಯನ್ನು ಚರ್ಚಿಸಲು, ಗ್ರಾಮದ ಹನುಮಂತ ದೇವರ ಗುಡಿ; ಆಲದ ಕಟ್ಟೆ ಚಹದಂಗಡಿಯೇ ಮೊದಲಾದ ಪ್ರಮುಖ ಕೇಂದ್ರಗಳಲ್ಲಿ ಅನೇಕರು ಸೇರಿ ತರ್ಜನ ಭರ್ಜನ ನಡೆಸಿದರು. ಆವರಿಸಿರುವ ಮಂಕು ಹೋಗಲಾಡಿಸುವಂತೆ ಲಿಂಗಪ್ಪನವರಲ್ಲಿ ಕೈಮುಗಿದು ಬೇಡಿಕೊಳ್ಳಬೇಕೆಂದೂ ಇದಕ್ಕೆ ಸಂಬಂಧಿಸಿದಂತೆ ಒಂದು ನಿಯೋಗವನ್ನು ರಚಿಸಬೇಕೆಂದೂ, ನಿಯೋಗದ ಮುಖಂಡತ್ವವನ್ನು ವಹಿಸಿಕೊಳ್ಳುವಂತೆ ಶರಭಣ್ಣನವರನ್ನು ಕೇಳಿಕೊಳ್ಳಬೇಕೆಂದೂ ಸಭೆ ಒಮ್ಮತದಿಂದ ನಿರ್ಧಾರ ಕೈಗೊಂಡಿತು.

ಶರಭಣ್ಣ ಎಂದರೆ ಬೇರೆ ಯಾರೂ ಅಲ್ಲ. ಲಿಂಗೈಕ್ಯ ಸಾಹುಕಾರು ರುದ್ರಗೌಡರ ಏಕಮಾತ್ರ ಪುತ್ರ. ಯಾವ ಶರಭಣ್ಣ ಎಂದರೆ ಯಾವನ ಸೊಂಟದ ಉಡುದಾರದಲ್ಲಿ ನೂರೆಂಟು ತೂತುಬಿಲ್ಲೆಗಳಿದ್ದು; ನಡೆಯುವಾಗ ಘಲ್ ಘಲ್ ಎಂದು ಹಿನ್ನೆಲೆ ಸಂಗೀತ ನುಡಿಸುವವೋ ಅದೇ ಶರಭಣ್ಣ. ಇಂಥಾದ್ದೊಂದು ಗೌರವ ತನಗೆ ಲಭಿಸಬಹುದು ಎಂದು ಮಧ್ಯವಯಸ್ಕನೂ; ಕುಳ್ಳನೂ; ಸ್ಥೂಲಕಾಯದವನೂ ಆದ ಶರಭಣ್ಣ ಕನಸು ಮನಸಿನಲ್ಲೂ ಯೋಚಿಸಿರಲಿಲ್ಲ. ಆ ಭಾವಿ ಸರಪಂಚನೂ; ಸಂತಾನಹೀನನೂ ಆದ ಆತನು ನಿಯೋಗದ ಮುಖಂಡತ್ವವನ್ನು ವಹಿಸಿಕೊಳ್ಳಲು ತಾನು ಸಮರ್ಥನಲ್ಲ ಎಂದು ನಿರಾಕರಿಸಿದನು. ಕಾರಣ ಲಿಂಗಪ್ಪನವರ ತ್ರಿಶೂಲ ಸ್ವರೂಪಿ ನಾಲಗೆ ಎದುರು ನಿಲ್ಲುವ ಶಕ್ತಿ ತನಗಿರಲಿಲ್ಲ. ಅನುಭವದ ತಾನು ಎಷ್ಟೋ ಬಾರಿ ಲಿಂಗಪ್ಪನವರ ನಾಲಿಗೆಯಾಘಾತದಿಂದ ಕೊಲೆಯಾಗಿ ಮತ್ತೆ ಮತ್ತೆ ಹುಟ್ಟಿ ಬದುಕಿದ್ದನು. ಮತ್ತೊಮ್ಮೆ ನಿರ್ನಾಮವಾಗಬಾರದೆಂದು ನಿರ್ಧರಿಸಿ ಲಿಂಗಪ್ಪನವರ ಕಣ್ಣಿಗೆ ಬೀಳದಂತೆ ಜಾಗ್ರತೆ ವಹಿಸಿದ್ದನು. ಈಗ ಧುತ್ತನೆ ಹೋತಾ ಹೋಗಿ ಲಿಂಗಪ್ಪನವರ ಎದುರಿಗೆ ನಿಲ್ಲುವುದೆಂದರೇನು! ಅವರು ತಮ್ಮ ನಾಲಗೆಯಿಂದಪ್ಪಳಿಸುವುದಿಲ್ಲವೆಂಬುದಕ್ಕೆ ಏನು ಖಾತರಿ! ಈ ಗುರುತರ ಜವಾಬ್ದಾರಿ ಹೊರಿಸಬೇಡಿರಪ್ಪಾ ಎಂದು ವಿವಿಧಾಲಾಪನೆ ಮಾಡಿ ಕೇಳಿಕೊಂಡನು. ಆಗ ಚಿದಾನಂದಾವಧೂತ ವಿರಚಿತ ದೇವಿ ಪುರಾಣವನ್ನು ಸೊಗಸಾಗಿ ಪಾರಾಯಣ ಮಾಡುವಾತನೂ; ವಯೋವೃದ್ಧನೂ; ಋಣಶೇಷ ಉಳ್ಳಾತನೂ ಆದಂಥ ಗಟ್ಟಿ ಜಲಂಧರಪ್ಪ ಮುಂದೆ ಬಂದು ''ಇದು ನಮ್ಮೂರ ಘನತೆ ಪ್ರಶ್ನೆ ಆಗಿರುವಂತೆಯೇ ನಿನ್ನ ರಾಜಕೀಯ ಭವಿಷ್ಯದ ಅಳಿವು ಉಳಿವಿನ ಪ್ರಶ್ನೆಯೂ ಆಗಿದೆ ಕಣ್ ಶರಭಣ್ಣಾ... ನೀನು ಹೇಗಾದರೂ ಮಾಡಿ ಲಿಂಗಪ್ಪನವರ ನಾಲಗೆ ಪ್ರಜ್ವಲಿಸುವಂತೆ ಮಾಡು. ಪ್ರತಿಯಾಗಿ ಬೆಳ್ಳಿ ನಾಲಗೆ ಮಾಡಿಸಿಕೊಡುವುದಾಗಿಯೂ ಆಮಿಷ ತೋರಿಸು. ಕೋಪದ ಭರದಲ್ಲಿ ಲಿಂಗಪ್ಪಾಜಿಯವರು ಬಯ್ದ್ರೆ ಬಯ್ಯಿಸ್ಕೋ; ಉಗಿದ್ರೆ ಉಗಿಸ್ಕೋ... ನಿನ್ನ ಜನ್ಮ ಪಾವನವಾಯಿತೆಂದೇ ತಿಳಿ... ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ ಅಂತ ಹಿರಿಯರೇ ಹೇಳಿದ್ದಾರೆ. ನಿನಗೆ ಜನ್ಮ ಕೊಟ್ಟಿರೋ ಈ ಗ್ರಾಮದ ಘನತೆ ಗೌರವ ಕಾಪಾಡು'' ಎಂದು ರಾಗಯುಕ್ತವಾಗಿ ಹೇಳಲು ಶರಭಣ್ಣ ಗತ್ಯಂತರವಿಲ್ಲದೆ ಒಪ್ಪಿಕೊಂಡನು. ಜಲಂಧರಪ್ಪನ ಉದ್ದೇಶ ಶರಭಣ್ಣನ್ನು ವಾಮಾಗೋಚರವಾಗಿ ಬಯ್ಯಿಸುವುದೇ ಆಗಿತ್ತು. ಕಾರಣ ಲಿಂಗಪ್ಪನವರು ತಮ್ಮ ಆರನೇ ಇಂದ್ರಿಯದ ಮೂಲಕ ಶರಭಣ್ಣನ ಸಾವಿರ ಹುಳುಕುಳನ್ನು ಗ್ರಹಿಸದೆ ಇದ್ದಿರಲಾರರು. ಯೇನಕೇನ ಶರಭಣ್ಣ

ನಿಯೋಗದ ನೇತೃತ್ವ ವಹಿಸಲು ಒಪ್ಪಿದರೆಂಬ; ಜಲಂಧರಪ್ಪನ ಸಲಹೆಯನ್ನು ಗೌರವಿಸಿದರೆಂಬ ವಿಷಯ ತಿಳಿದು ಗ್ರಾಮ ನೆಮ್ಮದಿಯಿಂದ ಉಸಿರುಬಿಟ್ಟಿತು.

ಇಂಥದೊಂದು ಮುಖಂಡತ್ವಕ್ಕೆ ಶರಭಣ್ಣನನ್ನು ಆಯ್ಕೆ ಮಾಡಿದ್ದರಲ್ಲಿ; ಇದನ್ನು ಒಪ್ಪಿಕೊಳ್ಳಲು ಆತನು ಮೊದ ಮೊದಲು ಹಿಂದೇಟು ಹಾಕಿದ್ದರಲ್ಲಿ ಕಾರಣಗಳು ಇಲ್ಲದಿಲ್ಲ. ದೇವಾನುದೇವತೆಗಳನ್ನೂ; ಕಿನ್ನರ ಕಿಂಪುರುಷರನ್ನೂ ಬಿಟ್ಟಿರದಿದ್ದ ನಾಸ್ತಿಕ ಮಹಾಶಯರಾದ ಲಿಂಗಪ್ಪನವರು ಬಯ್ಯುವ ಕಲೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡಿದ್ದಂಥ ದಿನಗಳಲ್ಲಿ ಶರಭಣ್ಣ ರಾಜಕೀಯ ಕ್ಷೇತ್ರದಲ್ಲಿ ಪ್ರವರ್ಧಮಾನಕ್ಕೆ ಬರಲು ಹವಣಿಸುತ್ತಿದ್ದನು. ತನ್ನ ಹಿತ-ಮಿತ ಶತ್ರುಗಳ ಬಾಯಿ ಮುಚ್ಚಿಸಲು ಅಸಮರ್ಥನಾಗಿದ್ದನು. ಅದಕ್ಕಾಗಿ ಆತನು ಫಿರಂಗಿಯೋಪಾದಿ ನಾಲಿಗೆಯ ಲಿಂಗಪ್ಪನವರನ್ನು ಹಿಂದಿಟ್ಟುಕೊಂಡು ಆಡ್ಡಾಡಿ ಶತ್ರು ಶೇಷದಿಂದ ಮುಕ್ತನಾದನು. ಅನಂತರ ಹೊಳೆ ದಾಟಿದ ಮೇಲೆ ಅಂಬಿಗನ ಮಿಂಡ ಅನ್ನುತ್ತಾರಲ್ಲ... ಹಾಗೆ ಲಿಂಗಪ್ಪನವರನ್ನು ದೂರ ಇಟ್ಟನು. ಆ ಸಂದರ್ಭದಲ್ಲಿ ಲಿಂಗಪ್ಪನವರು ಗೂರಲು ಉಬ್ಬಸ ರೋಗದಿಂದ ನಾನಾವಸ್ಥೆ ಅನುಭವಿಸುತ್ತಿದ್ದರಷ್ಟೆ. ಆ ಸಂದರ್ಭದಲ್ಲಿ ಜೀವಂತವೂ ಔಷಧಯುಕ್ತವೂ ಆದ ಮೀನನ್ನು ನುಂಗಿಸುವುದರ ಮೂಲಕ ಗೂರಲು ರೋಗವನ್ನು ಇಲಾಜು ಮಾಡುವ ಹೈದರಾಬಾದಿನ ಯುನಾನಿ ವೈದ್ಯರೋರ್ವರು ದೂರದ ಬಳ್ಳಾರಿ ನಗರದಲ್ಲಿ ಬಿಡಾರ ಹೂಡಿದ್ದರಷ್ಟೆ. ಅಪ್ಪಟ ಸಸ್ಯಾಹಾರಿಗಳಾದ ಲಿಂಗಪ್ಪಾಜಿಯವರು ತಾವೂ ಬಳ್ಳಾರಿಗೆ ಹೋಗಿ ಜೀವಂತ ಮೀನನ್ನು ನುಂಗಿ ಗೂರಲು ರೋಗದಿಂದ ಮುಕ್ತಿ ಹೊಂದಬೇಕೆಂದು ಕ್ರತು ನಿಶ್ಚಯ ಮಾಡಿದರು. ಆ ಕಾಲದಲ್ಲಿ ಬಳ್ಳಾರಿಗೆ ಹೋಗಿ ಬರುವುದೆಂದರೆ ಹುಡುಗಾಟದ ವಿಷಯವಾಗಿರಲಿಲ್ಲ. ಮುಖ್ಯವಾಗಿ ಬಾಧಿಸಿದ್ದು ಹಣಕಾಸಿನ ಅಡಚಣೆ. ತಮ್ಮಿಂದ ಅನೇಕ ರೀತಿಯಲ್ಲಿ ಉಪಕೃತನಾಗಿರುವ ಶರಭಣ್ಣನ ಬಳಿಗೆ ಹೋಗಿ ಕೇವಲ ಒಂದು ನೂರು ರೂಪಾಯಿಗಳನ್ನು ಅಧಿಕಾರವಾಣಿಯಿಂದ ಕೇಳಿದರು. ಪೆಟಾರಿಯಲ್ಲಿ ಪೆಂಡೆ ಪೆಂಡೆ ಹಣ ವಿದ್ದರೂ ಶರಭಣ್ಣ ತನ್ನ ಬಳಿ ದಮ್ಮಡಿ ಇಲ್ಲವೆಂದು ಹೇಳಿಬಿಟ್ಟ. ಅದರಿಂದ ಕ್ರುದ್ಧರಾದ ಲಿಂಗಪ್ಪಾಜಿಯವರು ಅಂಥೋನು, ಯಿಂಥೋನಂತ ಹತ್ತು ನಿಮಿಷಗಳ ಪರ್ಯಂತರ ವಾಚಾಮಗೋಚರವಾಗಿ ಬಯ್ದರು. ತದನಂತರ ಗೂರಲು ಉಲ್ಬಣಿಸಲಾಗಿ ಮನೆಗೆ ವಾಪಸಾದರು. ಅವರು ಮನಸ್ಸು ಮಾಡಿದ್ದರೆ ಬೇರೆಯವರ ಕಾರಿನಲ್ಲಿ ಬಳ್ಳಾರಿಗೆ ಹೋಗಿ ಬರಬಹುದಾಗಿತ್ತು. ಆಸೆಬುರುಕರಾಗಿರದಿದ್ದ ಅವರು ಯಾವ ಆಮಿಷಕ್ಕೂ ಬಲಿ ಬೀಳುವವರಾಗಿರಲಿಲ್ಲ. ಗೂರಲು ರೋಗಿಗಳೆಂದರೆ ಜವರಾಯನು ಹೆದರಿ ಯೋಜನ ದೂರ ಓಡುವವನಾಗಿದ್ದುದರಿಂದ ಸಾವು ಕೂಡ ಅವರ ಸಮೀಪ ಸುಳಿದಾಡುತ್ತಿರಲಿಲ್ಲ. ಹೀಗೆ ಮೃತ್ಯುಂಜಯರಾಗಿದ್ದ ಅವರು ನಂಬಿಕೆ ದ್ರೋಹಿ ಶರಭಣ್ಣನ್ನು ಹುಡುಕಿಕೊಂಡು ಹೋಗಿ ಬಯ್ಗುಳ ವರ್ಷ ಕರೆಯತೊಡಗಿದರು. ಅದರ ಪರಿಣಾಮವಾಗಿ ಶರಭಣ್ಣನು ಲಿಂಗಪ್ಪಾಜಿ ಎಂದರೆ ಬೆದರಿ ಬೆಚ್ಚಿ ಬೀಳಲಾರಂಭಿಸಿದನು. ಲಿಂಗಪ್ಪನವರ ಕಣ್ತಪ್ಪಿಸಿ ಅಡ್ಡಾಡಲಾರಂಭಿಸಿದನು. ತನ್ನ ಗಂಡನ ಯೋಗಕ್ಷೇಮ ಕಾಪಾಡುವುದು

ಸತೀಧರ್ಮವೆಂದು ಬಗೆದ ಗೌರಮ್ಮ ಸಮಸ್ತ ಸಂಪತ್ತಿದ್ದ ಜೇರಿಗೆ ಡಬ್ಬವನ್ನೇ ಲಿಂಗಪ್ಪನವರ ಮುಂಟಟ್ಟು ತನ್ನ ಗಂಡನ ಮಹಾಪರಾಧವನ್ನು ಮನ್ನಿಸುವಂತೆ ಕೇಳಿಕೊಂಡಳು. ಆದರೆ ಅವರು ಅದನ್ನು ಮುಟ್ಟಲೂ ಇಲ್ಲ; ಆಕೆಯ ಗಂಡನನ್ನು ಕ್ಷಮಿಸಲೂ ಇಲ್ಲ. ಇದಿಷ್ಟು ಪೂರ್ವಾಪರ.

ಈಗ ಇದ್ದಕ್ಕಿದ್ದಂತೆ ಶರಭಣ್ಣ ಲಿಂಗಪ್ಪನವರೆದುರು ಕೈಜೋಡಿಸಿ ನಿಲ್ಲುವುದೆಂದರೇನು? ಊಟ ಬಡಿಸುವಾಗ್ಗೆ ಸತೀಮಣಿ ಗೌರಮ್ಮ ನಿಮ್ಮ ಗ್ರ್ರಾಚಾರ ನೆಟ್ಗಿಲ್ಲ... ಲಿಂಗಪ್ಪನುಸಾಬರಿಗೆ ಹೋಗಬ್ಯಾಡಿ ಎಂದು ಪರಿಪರಿಯಿಂದ ಕೇಳಿಕೊಂಡಳು. ಆದರೆ ಗಂಡ ಬಾಯಿಯಿಂದ ಬಡಿಸಿದ ಬಯ್ಗಳ ಸುಗ್ರ್ರಾಸ ಭೋಜನ ಮಾಡಿ ತೆಪ್ಪಗಾದಳು. ಶರಭಣ್ಣನು ಮಹತ್ವದ ಯುದ್ಧಕ್ಕೆ ಹೊರಟ ಸೇನಾಪತಿಯಂತೆ ಮಾನಸಿಕವಾಗಿಯೂ, ದೈಹಿಕವಾಗಿಯೂ ಸಂಸಿದ್ಧಗೊಂಡನು. ಅದೇ ವೇಳೆಗೆ ಸರಿಯಾಗಿ ಈ ಸಂಗತಿ ಹೇಗೋ ತಿಳಿದು ಪಾರೆವ್ವ ಆಟವಾಳಿಗೆ ಮನೆಗೆ ಓಡಿ ಬಂದಳು. ಶರಭಣ್ಣ ದಂಪತಿಗಳು ಆಕೆಯನ್ನು ಆದರದಿಂದ ಬರಮಾಡಿಕೊಂಡರಲ್ಲದೆ ತಿನ್ನಲೊಂದಿಷ್ಟು; ಕುಡಿಯಲೊಂದಿಷ್ಟು ಕೊಟ್ಟು ಸತ್ಕರಿಸಿದರು. ಒಂದು ಕಡೆಯಿಂದ ನೋಡಿದರೆ ಗೌರಮ್ಮಗೆ ಪಾರವ್ವ ದೂರದ ಸಂಬಂಧಿಯಾಗಬೇಕು. ಆದರೂ ಎಷ್ಟೋ ಅಷ್ಟು ಮಾತಾಡಿ ಗೌರಮ್ಮ ಅಡುಗೆ ಮನೆಯ ಕದದ ಮರೆಯಲ್ಲಿ ಗುಟ್ಟಾಗಿ ನಿಲ್ಲಲು ಶರಭಣ್ಣ ಮತ್ತು ಪಾರವ್ವರ ನಡುವೆ ಸಂಭಾಷಣೆ ಆರಂಭವಾಯಿತು.

ಪಾರವ್ವ ತನ್ನ ಗಂಡ ಒಂದು ವಾರವಾದರೂ ತನ್ನನ್ನು ಒಮ್ಮೆ ಕೂಡ ಬಯ್ಯಲಿಲ್ಲವೆಂದೂ; ಅಷ್ಟೇ ಏಕೆ? ಯಾರೊಬ್ಬರನ್ನೂ ಬಯ್ಯುತ್ತಿಲ್ಲವೆಂದೂ; ದುರುಗುಟ್ಟಿ ಸಹ ನೋಡುತ್ತಿಲ್ಲವೆಂದೂ ವಿವರಿಸಿದಳು. ನೀನಾದ್ರೂ ಮೇಲೆ ಬಿದ್ದು ಮಾತಾಡಿಸಬೇಕಿತ್ತಮ್ಮಾ ಎಂದಾತ ಕೇಳಿದ್ದಕ್ಕೆ ಆಕೆಯು ತಾನು ಮಾತನ್ನಾಡಿಸಿದ್ದಾಗಿಯೂ; ಅದಕ್ಕಾತ ಪ್ರತ್ಯುತ್ತರವಾಗಿ ಏನ್ರಿ, ಹೋಗ್ರಿ, ಬರ್ರಿ ಎಂದು ಬ್ರಾಹ್ಮಣರ ಥರ ಮಾತನಾಡಿದನೆಂದು ಹೇಳಿ ದುಃಖ ತಡೆಲಾಗದೆ ಬಿಕ್ಕಳಿಸತೊಡಗಿದಳು. ಆಕೆಯ ಮಹದೇಚ್ಛೆ ಇದ್ದದ್ದು ತನ್ನ ಗಂಡ ತನ್ನನ್ನು ಹೇಗಾದರೂ ಮಾಡಿ ಬಯ್ಯಬೇಕೆಂಬುದಾಗಿತ್ತು. ಹೆಂಡತಿಯನ್ನು ಬಯ್ಯಲಾರದವನು ಊರವರನ್ನು ಹೇಗೆ ಬಯ್ದಾನು ಎಂಬುದಾಗಿತ್ತು ಬಯ್ಯುವುದನ್ನು ಬಿಟ್ಟಿದ್ದೇ ಆದಲ್ಲಿ ಆತ ಹೇಗೆ ಕುಟುಂಬ ನಿರ್ವಹಣೆ ಮಾಡಿಯಾನು ಎಂಬುದಾಗಿತ್ತು. ಆಕೆಯ ಮಾತುಗಳಿಂದ ಶರಭಣ್ಣನ ಹೃದಯ ಕರಗದೆ ಇರಲಿಲ್ಲ. ಆಕೆ ಹೇಳುವುದನ್ನು ನೋಡಿದರೆ, ಊರವರು ಹೇಳುವುದನ್ನು ನೋಡಿದರೆ, ಲಿಂಗಪ್ಪನವರು ತಮ್ಮ ಬಾಯಿಯಿಂದ ಅಣಿ ಮುತ್ತುಗಳನ್ನುದುರಿಸುತ್ತಲೇ ಕೊತ್ಲಚಿಂತಿಗೆ ಹೋದರು. ಅವರು ಬದಲಾಗಿರುವುದು ಅಲ್ಲಿಂದ ಬಂದ ಮೇಲೆಯೇ. ಅಂದರೆ ಆ ಗ್ರಾಮದಲ್ಲಿ ಅಸಾಧಾರಣ ಘಟನೆಯೊಂದು ನಡೆದಿದ್ದಿರಬಹುದು. ಅಲ್ಲಿ ಯಾರೋ ಮಾಯ ಮರಾಠಿ ತಮ್ಮ ಗ್ರಾಮದ ಅನರ್ಘ್ಯ ರತ್ನಕ್ಕೆ ಮಾಯಮಂತ್ರ ಮಾಡಿದ್ದರೂ ಮಾಡಿದ್ದಿರಬಹುದೆಂಬ ಸಂದೇಹ ಕಾಡಿತು. ಕೊತ್ಲಚಿಂತಿ ಮೊದಲೇ ಮೋಡಿಗಾರರ ತವರು... ಲಿಂಗಪ್ಪಾಜಿಯವರ ಸೊಂಟಕ್ಕಾಗಲೀ ರಟ್ಟೆಗಾಗಲೀ ಯಾರಾದರೂ ಕಟ್ಟಿರಬಹುದಾದ

ಯಂತ್ರ ತಾಯ್ತಗಳೇನಾದರೂ ಇವೆಯೇ ಎಂಬ ಅನುಮಾನ ವ್ಯಕ್ತಪಡಿಸಿದ. ಅಂಥ ಯಾವ ಗುರುತುಗಳಿಲ್ಲವೆಂದು ಪಾರವ್ವ ಹೇಳಿದಳು. ಅಲ್ಲಿಯೇ ಉಪಸ್ಥಿತನಿದ್ದ ಜಲಂಧರಪ್ಪ ಚೀಲದಿಂದ ಒಂದು ಹಿಡಿ ಲೋಬಾನ ಮಂತ್ರಿಸಿಕೊಟ್ಟು ಕೂಡಲೇ ಹೋಗಿ ಹೊಗೆ ಹಾಕುವಂತೆ ಸೂಚಿಸಿದನಲ್ಲದೆ ಮನೆ ದೇವರ ಪಟದೆದುರು ತುಪ್ಪದ ದೀಪ ಹಚ್ಚಿಟ್ಟು ತನ್ನ ಗಂಡಗೆ ಬಯ್ಯುವಂಥ ಪ್ರೇರಣೆ ನೀಡಬೇಕೆಂದು ಬೇಡಿಕೊಳ್ಳುವಂತೆಯೂ; ಮಂಡೆ ಕೊಡುವುದಾಗಿ ಹರಕೆ ಹೊತ್ತುಕೊಳ್ಳುವಂತೆಯೂ ಸಲಹೆ ನೀಡಿದನು. ಲಿಂಗಪ್ಪಾಜಿ ಎಂಟು ದಿನಗಳಿಂದ ಬಯ್ದೇ ಇಲ್ಲವೆಂದಾದಲ್ಲಿ ಮನೆಯಲ್ಲಿ ತುಪ್ಪ ಇರುವುದಾದರೂ ಹೇಗೆ ಸಾಧ್ಯ! ಅದಕ್ಕೆಂದೇ ಗಂಡನ ಆಜ್ಞೆ ಮೇರೆಗೆ ಗೌರಮ್ಮ ಒಂದು ಬಟ್ಟಲು ತುಪ್ಪ ತಂದುಕೊಟ್ಟಳು. ಸಲಹೆಗಳನ್ನು ತಲೆಯೊಳಗೂ, ತುಪ್ಪವನ್ನು ಕೈಯೊಳಗೂ ಧರಿಸಿಕೊಂಡ ಪಾರವ್ವ ಅಲ್ಲಿಂದ ತಮ್ಮ ಮೂಲೆಮನೆ ಕಡೆಗೆ ಲಗುಬಗೆಯಿಂದ ಹೆಜ್ಜೆ ಹಾಕಿದಳು.

ಕೊತ್ಲಚಿಂತಿಯಲ್ಲಿ ಏನು ನಡೆಯಿತು! ಏನು ಬಿಟ್ಟಿತು! ಎಂಬುದರ ಬಗ್ಗೆ ವಿಷಯ ಸಂಗ್ರಹಿಸಿಕೊಂಡು ಬರಲೆಂದು ತನ್ನ ಎಡಗೈ, ಬಲಗೈ ಬಂಟರಾದ ಅಕಬರು, ಮವುಲಾಲಿಯರನ್ನು ಆ ಹೊಳೆಯಾಚೆಗಿನ ಹಳ್ಳಿ ಕಡೆಗೆ ಗದುಮಿದನು. ಮೂಲೆ ಮನೇರ ಮನೆ ಅಂಗಳದಲ್ಲಿ ತನ್ನ ಶುಶ್ರೂಷೆ ಮಾಡಲಿಕ್ಕೆಂದು ಸಿದ್ದೀರ, ಗುರೀರ ಎಂಬ ಶಿಷ್ಯರನ್ನು ಹಿಂದೆ ಕಟ್ಟಿಕೊಂಡು ಅವಿಧೇಯ ಮಾಂಡಲಿಕನೋರ್ವ ತನ್ನ ಸಾಮ್ರಾಟನನ್ನು ಕಾಣಲಿಕ್ಕೆ ಹೇಗೆ ಹೋಗುವನೋ ಹಾಗೆಯೇ ಪಿತ್ರಾರ್ಜಿತ ಠೇಂಕಾರಾಲಂಕೃತನಾಗಿದ್ದ ಶರಭಣ್ಣನು ಮೂಲೆ ಮನೆ ಇದ್ದ ಈಶಾನ್ಯ ದಿಕ್ಕಿನ ಕಡೆ ಮುಖ ಮಾಡಿದನು. ಅದನ್ನು ಇಡೀ ಓಣಿಗೆ ಓಣಿಯೇ ನಿಂತು ನೋಡಿ ಶುಭ ಹಾರೈಸಿತು.

ಈಗ ಲಿಂಗಪ್ಪನವರ ಪೂರ್ವಾಪರದ ಕಡೆ ಪಕ್ಷಿನೋಟ ಬೀರೋಣ.

ಲಿಂಗಪ್ಪನವರಿಗೆ ಬಯ್ಗಳು ಸ್ವಯಾರ್ಜಿತವಾಗಿದ್ದವೇ ಹೊರತು ಖಂಡಿತ ಪಿತ್ರಾರ್ಜಿತವಾಗಿರಲಿಲ್ಲ. ಲಿಂಗ ಮೆಚ್ಚಿ ಅಹುದಹುದೆನ್ನುವಂತೆ ಅವರ ಪೂರ್ವಿಕರು ಮಾತಾಡುತ್ತಿದ್ದರು. ಮಳೆ ಆಶ್ರಿತ ಏಳೆಂಟು ಕೂರಿಗೆ ಹೊಲ ತಾತ ಮಾಲಿಂಗಪ್ಪನ ಕಾಲದವರೆಗೆ ಇತ್ತು. ಅದು ಅಸಾಧಾರಣ ರೀತಿಯಲ್ಲಿ ಕರಗಿದ್ದು ಲಿಂಗಪ್ಪನವರ ಪಿತಾಶ್ರೀ ಗುರುಲಿಂಗಪ್ಪನ ಕಾಲದಲ್ಲಿ. ಗುರುಲಿಂಗ ತನಗೊಬ್ಬ ಮಗ ಇದ್ದಾನೆಂಬ ಕಾರಣಕ್ಕೆ ಹೊಟ್ಟೆಗೆ ತಂಗಲು ಬಟ್ಟೆ ಕಟ್ಟಿಕೊಂಡು ಕಿಂಗ್ ಜಾರ್ಜನ ಮುಖ ಮುದ್ರೆಯುಳ್ಳ ಬೆಳ್ಳಿ ರೂಪಾಯಿಗಳನ್ನು ಎಣಿಸೀ ಎಣಿಸೀ ಬೇಸರ ನೀಗಿಕೊಳ್ಳುತ್ತಿದ್ದನು. ಅಲ್ಲದೆ ಕುಂಪಣಿ ಸರಕಾರದ ಕಟ್ಟಾ ಅಭಿಮಾನಿಯೂ ಆಗಿದ್ದನು. ಒಂದು ಗುರುವಾರ ಸಂತೆ ಮಾಡಿಕೊಂಡು ಬರಬೇಕಂತ ಹೋಬಳಿ ಕೇಂದ್ರವಾದ ಕೊಟ್ಟೂರಿಗೆ ಹೋದ. ಅಲ್ಲಿ ಅದೇ ದಿನ ಮಹಾತ್ಮಾ ಗಾಂಧೀಜಿಯವರ ಭಾಷಣದ ಕಾರ್ಯಕ್ರಮವಿತ್ತು. ಆತನ ವಾರಿಗೆಯವನಾದ ಮರಿಬಸಪ್ಪ ಒತ್ತಾಯ ಮಾಡಿದ್ದರಿಂದ ಒಲ್ಲದ ಮನಸ್ಸಿನಿಂದ ಭಾಷಣ ಕೇಳಲಿಕ್ಕೆಂದು ಹೋದನು. ಹೆಜ್ಜೆ ಹೆಜ್ಜೆಗೆ ಕಿಂಗ್ ಜಾರ್ಜು; ಯಿಕ್ಟೋರಿಯಾ ರಾಣಿಯರ ಧೀರೋದಾತ್ತ ನಿಲುವಿನ ಗಾಂಧೀಜಿಯವರ ಬಡಕಲು ವ್ಯಕ್ತಿತ್ವವನ್ನು ನೋಡದೇ

ಇರಲಿಲ್ಲ ತಾನು - ಆತನ ಮೊದಲೇ ಠಸ್ಸಾ ಪುಸ್ಸಂತ ಇಂಗ್ಲೀಷು ಮಾತಾಡುವವರನ್ನು ಕಂಡು ರೋಮಾಂಚನಗೊಳ್ಳುತ್ತಿದ್ದ. ಕುಂಪುಣಿ ಸರಕಾರದ ಪೋಲೀಸರನ್ನು ನಿಜವಾದ ಗಂಡಸರೆಂದೇ ಭಾವಿಸಿದ್ದ. ತನಗಿರೋ ಏಕಮಾತ್ರ ಪುತ್ರನಿಗೆ ಇಂಗ್ಲೀಷ್ ವಿದ್ಯಾಭ್ಯಾಸ ಮಾಡಿಸಿ ಕುಂಪಣಿ ಸರಕಾರದ ನೌಕರನನ್ನಾಗಿ ಮಾಡಬೇಕೆಂದು ಕ್ರತು ನಿಶ್ಚಯ ಮಾಡಿದ್ದ. ಅಂಥ ಮನಸ್ಥಿತಿಯ ಗುರುಲಿಂಗಪ್ಪನ ಕಣ್ಣಿಗೆ ಸ್ವಾತಂತ್ರ್ಯ ಹೋರಾಟಗಾರರು ಉದ್ಯೋಗವಿಲ್ಲದ ಬಡಗಿಗಳಂತೆ ಗೋಚರಿಸುತ್ತಿದ್ದರು. ಮೈದಾನ ಅಂಥ ಸಹಸ್ರಾರು ಬಡಗಿಗಳಿಂದಲೇ ತುಂಬಿತ್ತು, ಬೋಲೋ ಭಾರತ್ ಮಾತಾಕಿ ಜೈ; ಗಾಂಧಿ ಮಹಾತ್ಮಾಕಿ ಜೈ... ಬ್ರಿಟೀಷರೇ ಭಾರತ ಬಿಟ್ಟು ತೊಲಗಿ, ಇವೇ ಮೊದಲಾದ ಘೋಷಣೆಗಳು ಮಾರ್ಮಲೆಯುತ್ತಿರುವಾಗ ಶಿವಶಿವಾ ಅಂತ ಕಿವಿ ಮುಚ್ಚಿಕೊಳ್ಳುತ್ತಿದ್ದ. ಹೀಗೆ ಸ್ವಲ್ಪ ಹೊತ್ತಾಗುವಷ್ಟರಲ್ಲಿ ಮುಪ್ಪಾನು ಮುದುಕನೂ; ಫಕೀರನಂಥಾತನೂ ಆದ ಗಾಂಧೀಜಿ ನಾಕುಮಂದಿ ಸಹಾಯದಿಂದ ವೇದಿಕೆ ಏರಿದ್ದೂ ತಡವಾಗಲಿಲ್ಲ; ಜಯಘೋಷಗಳ ನಡುವೆ ಸಾಂಪ್ರದಾಯಕವಾಗಿ ನಾಕು ಮಾತಾಡಿದ್ದೂ ತಡ ಆಗಲಿಲ್ಲ. ಸ್ವಾತಂತ್ರ ನಿಧಿಗೆ ನಾಮುಂದು ತಾಮುಂದು ಅಂತ ಸಾವಿರಾರು ಮಂದಿ ದೇಣಿಗೆ ಅರ್ಪಿಸಿದ್ದೂ ತಡ ಆಗಲಿಲ್ಲ. ಅದರ ಅಗಾಧ ಪರಿಣಾಮದಿಂದಾಗಿ ಗುರುಲಿಂಗಪ್ಪಗೆ ತನ್ನ ಕುಬ್ಜತೆಯ ಅರಿವಾಯಿತು. ಉಪ್ಪು ಬೆಳ್ಳಗಡ್ಡೆ ಜೊತೆಗೆ ಪಾವಲಿ ಬೆಲೆಯ ಗಾಂಧಿ ಟೊಪ್ಪಿಗೆಯನ್ನೂ ಧರಿಸಿಕೊಂಡೇ ಊರಿಗೆ ವಾಪಸಾದನು.

ಊರಿಗೆ ವಾಪಸಾದ ತಾನು ಕೈಕಟ್ಟಿ ಕೂಡ್ರಲಿಲ್ಲ. ಹೆಂಡತಿ ಒಬ್ಬ ಮಗ ಇದ್ದಾನೆ ಕಣ್ರಿ ಅಂತ ಗಲಗಲಾಂದರೂ ಕೇಳದೆ ಚರಾಸ್ತಿ ಸ್ಥಿರಾಸ್ಥಿಯನ್ನೆಲ್ಲಾ ಮಾರಿ ಗಾಂಧೀಜಿ ನೇತೃತ್ವದ ಸ್ವಾತಂತ್ರ್ಯ ಹೋರಾಟದ ನಿಧಿಗೆ ಅರ್ಪಿಸಿಬಿಟ್ಟ. ಒಂದು ಚರಖಾ; ಒಂದು ದಡೇವು ಅರಳೆ ತಂದು ಮನೆಯ ಅಟೆವಾಳಿಗೆಯಲ್ಲಿ ನೂಲುತ್ತ ಕೂತು ಕೆಲವೇ ದಿನಗಳಲ್ಲಿ ಗಾಂಧೀ ಗುರುಲಿಂಗಪ್ಪನೆಂದೇ ಹೆಸರಾಗಿಬಿಟ್ಟನು.

ಮೊದಮೊದಲಿಗಿದೆಲ್ಲವೂ ಬಲು ಚಂದ ಇತ್ತು. ಮುಂದೊಂದಿನ ನಿಮ್ಮ ದೇಶನಾ ನೀವು ತಗಳ್ರಪಾ ಅಂತ ಭಾರತವನ್ನು ದೇಶಭಕ್ತರ ಕೈಗೆ ಕೊಟ್ಟು ಬ್ರಿಟಿಷರು ಗಂಟುಮೂಟೆ ಕಟ್ಟಿಕೊಂಡು ತಮ್ಮ ದೇಶಕ್ಕೆ ತಾವು ವಾಪಸಾದರು. ಅದಾದ ಮೇಲೆ ಖಳನೊಬ್ಬ ಗಾಂಧೀಜಿ ಎದೆಗೆ ಗುಂಡಿಟ್ಟು ಕೊಲೆ ಮಾಡಿಬಿಟ್ಟ. ಇಂಥ ಘಟನೆಗಳಿಂದ ಗಾಂಧಿ ಗುರುಲಿಂಗಪ್ಪ ತತ್ತರಿಸಿಹೋದರು. ಈ ದೇಶದಲ್ಲಿ ಮಂದಿ ಬಲು ಸುಮಾರದಾರೆ ಎಂಬ ನಿರ್ಣಯಕ್ಕೆ ಬಂದರು, ತಮ್ಮ ಬಳಿ ಉಳಿದಿರುವ ಆಸ್ತಿ ಅಡವಾದರೂ ಏನು! ತಮ್ಮ ಮಗ ಲಿಂಗಪ್ಪನನ್ನು ಎದುರಿಗೆ ಕೂಡ್ರಿಸಿಕೊಂಡು ನೆರೆಹೊರೆಯರನ್ನು ನಿನ್ನಂತೆಯೇ ಪ್ರೀತಿಸು, ಮಾತೇ ಜೋತಿರ್ಲಿಂಗ, ನುಡಿದರೆ ಮುತ್ತಿನ ಹಾರದಂತಿರಬೇಕು, ಮಾತು ಬಲ್ಲವನಿಗೆ ಜಗಳವಿಲ್ಲ, ಮಾತು ಆಡಿದರೆ ಹೋಯಿತು - ಮುತ್ತು ಒಡೆದರೆ ಹೋಯಿತು ಎಂಬಿವೇ ಮೊದಲಾದ ನೀತಿ ವಾಕ್ಯಗಳನ್ನು ಹಲಗೆ ಮೇಲೆ ಬರೆದು ತಿಳಿಸಿಯೇ ತಿದ್ದಿಸಿದರು. ಜೈಮಿನಿ ಭಾರತ, ಕುಮಾರವ್ಯಾಸ ಭಾರತ, ರಾಮಾಯಣ, ಸತ್ಯಹರಿಶ್ಚಂದ್ರ ಕಥೆಗಳನ್ನು ಓದಿಸಿದರು. ಅನಂತರ 'ಇವೇ ನಿಂಗೆ ನಾನು ಬಿಟ್ಟು ಹೋಗ್ತಿರೋ ಚರಾಸ್ತಿ

ಸ್ಥಿರಾಸ್ತಿಕಣಪ್ಪಾ... ಮುಂದೆ ಇವೇ ನಿಮಗೆ ಬದುಕೋ ದಾರಿ ತೋರಿಸ್ತಾವೆ' ಎಂದು ಹೇಳಿದರು. ಮೊದಲನೆ ಪಂಚವಾರ್ಷಿಕ ಯೋಜನೆ ಅರ್ಧ ಆಗುವವರೆಗೆ ಬದುಕಿದ್ದ ಅವರು ಇದ್ದಕ್ಕಿದ್ದಂತೆ ಕೂಳು, ನೀರು ಬಿಟ್ಟು ಸಲ್ಲೇಖನ ವ್ರತ ಕೈಕೊಂಡು ಕೆಲ ದಿನಗಳವರೆಗೆ ಬದುಕಿದ್ದು ಒಂದು ದಿನ ಗಪ್ಪಂತ ಕಣ್ಣು ಮುಚ್ಚಿಕೊಂಡುಬಿಟ್ಟರು.

ಆ ಛಪ್ಪನ್ನಾರು ನೀತಿ ವಾಕ್ಯಗಳನ್ನೆ ಬಂಡವಾಳವಾಗಿರಿಸಿಕೊಂಡು ಭಲೇ ಠೀವಿಯಿಂದ ಬದುಕುವ ಪ್ರಯತ್ನ ಮಾಡಿದ ಲಿಂಗಪ್ಪನವರು ತಾವು ದೊಡ್ಡವರಾದ ತಪ್ಪಿಗೆ ಮದುವೆಯಾಗಿಬಿಟ್ಟಿದ್ದರು. ಮದುವೆಯಾದ ತಪ್ಪಿಗೆ ಕೈಯ ಬೆರಳುಗಳಷ್ಟು ಮಕ್ಕಳಾದವು. ಅವುಗಳ ಪೈಕಿ ಬದುಕುಳಿದವು ಎಷ್ಟೋ! ಸತ್ತೋವು ಎಷ್ಟೋ ದಿನಗಳೆದಂತೆ ಲಿಂಗಪ್ಪನವರು ಸಂಸಾರ ನಿಭಾಯಿಸಲಿಕ್ಕೆ ಪಿತ್ರಾರ್ಜಿತ ನೀತಿ ವಾಕ್ಯಗಳು ಉಪಯೋಗಕ್ಕೆ ಬರಲಾರವು ಎಂಬ ಸತ್ಯವನ್ನು ಮನಗಂಡರು. ಗಾಂಧೀಜಿಯವರು ತ್ರಿವರ್ಣ ಚಿತ್ರದ ಮೇಲೆ ತಮ್ಮ ತಂದೆ ದೇಶಭಕ್ತ ಗಾಂಧೀ ಗುರುಲಿಂಗಪ್ಪನವರ ಕಪ್ಪು ಬಿಳುಪು ಚಿತ್ರವನ್ನು ಬಕಬೋರಲು ಮಲಗಿಸಿ ''ನೀವಿಬ್ರು ಸೇರ್ಕೊಂಡು ನನ್ನನ್ನು ಹಾಳುಬಿಟ್ಟಿರಲ್ಲ'' ಎಂದು ಗೋಳಾಡುತ್ತ ಹಾಗೆ ನಿದ್ದೆ ಹೋದರು. ಅವರು ಆಗ ಮಾಡಿದ್ದು ಐತಿಹಾಸಿಕ ನಿದ್ದೆ. ಆ ನಿದ್ದೆಯ ಬಗ್ಗೆ ಲಿಂಗಪ್ಪಾಜಿಯವರು ಪತ್ರಕರ್ತರೋರ್ವರಿಗೆ ವಿವರವಾಗಿ ಹೇಳಿದರು. ಅದೆಂದರೆ... ಆಗ ಮಲಗಿಕೊಂಡರಲ್ಲ. ಮಲಗಿದವರು ಕನಸು ಕಾಣಬೇಕಲ್ಲ. ಅವರ ನಿದ್ದೆಯ ಅಂಥಾದ್ದೊಂದು ಕನಸಿನಲ್ಲಿ ನಿರ್ಗತಿಕ ಮಹಿಳೆಯೊಬ್ಬಳು ಕಾಣಿಸಿಕೊಂಡು ತಾನು ಸರಸ್ವತಿಯ ಮಲತಾಯಿಯ ಮಗಳು ಎಂದು ಪರಿಚಯಿಸಿಕೊಂಡಳು. ಅವರ ನಾಲಗೆ ಮೇಲೆ ಬಯ್ಗುಳ ಪ್ರಣವಾಕ್ಷರಗಳನ್ನು ಬರೆದಳು. ನಿನ್ನ ಬಾಯಿ ಬಯ್ಗುಳ ಅಕ್ಷಯಪಾತ್ರೆಯಾಗುತ್ತದೆ ಎಂದು ಹರಸಿ ಮಾಯವಾದಳು.

ಲಿಂಗಪ್ಪಾಜಿ ಇಂಥದೊಂದು ಕನಸು ಕಂಡ ಸಂದರ್ಭದಲ್ಲಿ ಸದರಿ ಗ್ರಾಮವು ಬಯ್ಗುಳ ವಿಷಯದಲ್ಲಿ ಬರವನ್ನೆದುರಿಸುತ್ತಿತ್ತು. ಕೋರಿ, ಪ್ಯಾಲಿ, ದಡ್ಡ ಎಂಬಂಥ ಸರಳ ಸುಂದರ ಮತ್ತು ಸವಕಲು ಬಯ್ಗುಳನ್ನು ಉಪಯೋಗಿಸಿ ಉಪಯೋಗಿಸಿ ಗ್ರಾಮ ಸುಸ್ತಾಗಿಬಿಟ್ಟಿತ್ತು. ಮರ್ಮಾಂಗಕ್ಕೆ ನಾಟುವಂಥ ಬಯ್ಗುಳನ್ನು ಉಪಯೋಗಿಸಲು ಸಕಲರು ಹಿಂದೇಟು ಹಾಕುತ್ತಿದ್ದ ಸಂಕ್ರಮಣ ಕಾಲದಲ್ಲಿಯೇ ಲಿಂಪ್ಪಾಜಿಯವರ ಬಾಯೊಳಗೆ ಬಯ್ಗುಳ ಅರುಣೋದಯ ಮೂಡಿದ್ದು. ಜೊತೆಗೆ ಘೋರ ಬಡತನದಿಂದಾಗಿ ಶ್ರೀಯುತರು 'ಮಾತಾಡು ಇಲ್ಲವೆ ಮಡಿ' ಎಂಬ ಕಠೋರ ನಿರ್ಧಾರಕ್ಕೆ ಬಂದುಬಿಟ್ಟಿದ್ದರು. ಮುಗಿಲಿಂದ ಎರಡು ಹನಿ ಕಡಕಂಡು ಭೂಮಿಗುರುಳಲು ಹಿಂದೇಟು ಹಾಕಿದ ಪರಿಣಾಮವಾಗಿ ವಿಧಿ ಬಡತನವನ್ನು ಸಾರ್ವತ್ರೀಕರಿಸಿಬಿಟ್ಟಿತ್ತು. ಕರುಣಾಜನಕ ಎಂಬ ಕರುಣಾಜನಕ ಪದ ಜನ್ಮ ತಾಳಿದ್ದು ಅದೇ ಸಂದರ್ಭದಲ್ಲಿಯೇ.

ಅಣಬೆಗಳಂತೆ ಸ್ಟೋರು ಸೊಸೈಟಿಗಳನ್ನು ಹುಟ್ಟು ಹಾಕಿ ಅವುಗಳ ದ್ವಾರಾ ಅಮೇರಿಕಾದಿಂದ ಆಮದು ಮಾಡಿಕೊಂಡ ಕೆಂಪು ಜೋಳವನ್ನು ಸದರೀ ದೇಶಕ್ಕೆ ಕಪ್ಪು ಜನರಿಗೆ ಹಂಚುವ ಕಾರ್ಯವನ್ನು ಸರ್ಕಾರ ಕೈಕೊಂಡಿತ್ತಷ್ಟೇ. ಆ ಜೋಳ ಬಯಸಿ ಹೋದ ಲಿಂಗಪ್ಪಾಜಿಯವರನ್ನು ತಡೆದ ಅಧಿಕಾರಿಯು ನೀನು ಮೇಲ್ಜಾತಿಯವನೆಂದೂ, ದೇಶಭಕ್ತರ ಮಗನಾದ ನೀನು ಬಡತನದ ರೇಖೆಗಿಂತ ಕೆಳಗಿರಲು ಸಾಧ್ಯವಿಲ್ಲವೆಂದು

ಹೇಳಿದನು. ಆಗಲೆ ಲಿಂಗಪ್ಪಾಜಿಯವರು ಪ್ರಥಮವಾಗಿ ತಮ್ಮ ನಾಲಗೆಯನ್ನು ಬಳಸಿದ್ದು. ಅವರ ನಾಲಗೆ ಎಂಬ ನಾಸಾ ಕೇಂದ್ರದಿಂದ ಉಡಾವಣೆಗೊಂಡ ಬಯ್ಗಳ ಕ್ಷಿಪಣಿಗಳು ಅಸಂಖ್ಯಾತ. ಅಸಂಖ್ಯಾತ ಕರ್ಣಗಳಿಗೆ ಬಯ್ಗಳ ಅಮೃತಪಾನವಾಯಿತು. 'ಭಲಾ ಲಿಂಗಪ್ಪಾಜಿ ಭಲಾ' ಎಂದು ಅನೇಕರು ಉದ್ಗರಿಸಿದರು.

ಆದರೆ ಸೊಪ್ಪೆಟ ಅಧಿಕಾರಿಯು ದುಡುದುಡನೆ ಹೊರ ಓಡಿಬಂದು ಲಿಂಗಪ್ಪಾಜಿಯವರ ಬಾಯಿಯ ಮೇಲೆ ಮೂರು ಉಂಗುರಗಳಿಂದ ಲಕಲಕ ಹೊಳೆಯುತ್ತಿದ್ದ ಅಂಗೈ ಇಟ್ಟು ಜೋಪಾನವಾಗಿ ಒಳಗೆ ಕರೆದೊಯ್ದು ಕಾಪಿಗೀಪಿ ಕೊಟ್ಟು ಸತ್ಕರಿಸಿದವರಲ್ಲದೆ ಬರೋಬ್ಬರಿ ಎರಡು ಗಿದ್ದನ ಕೆಂಪು ಜೋಳ ಕೊಟ್ಟು ಬೀಳ್ಕೊಟ್ಟರು. ತಾವೋರ್ವ ಪ್ರತಿಭಾವಂತ ತೆಗಳು ಕಲಾವಿದ ಎಂದು ಮನವರಿಕೆ ಅವರಿಗಾಯಿತು. ಹದಿನೆಂಟು ಅಕ್ಷೋಹಿಣಿ ಸೈನ್ಯಕ್ಕಿಂತಲೂ ಬಲಿಷ್ಠವಾಗಿರುವ ನಾಲಗೆ ತಮ್ಮ ಬಾಯೊಳಗೆ ಇದೆ ಎಂಬ ಭರವಸೆ ಅವರಿಗೆ ಮೂಡಿದ್ದು ಆಗಲೆ. ಯಾವ ನಕ್ಷತ್ರದಲ್ಲಿ ಅವರ ಬಯ್ಗಳ ದಂಡಯಾತ್ರೆ ಆರಂಭಗೊಂಡಿತೋ! ಅದು ಮುಂದೆ ಮೂರು ದಶಕಗಳ ಕಾಲ ಚೈತ್ರಯಾತ್ರೆಯಂತೆ ಸಾಗಿ ಗ್ರಾಮದ ಮತ್ತು ಜಿಲ್ಲೆಯ ಸಾಂಸ್ಕೃತಿಕ ಸ್ವರೂಪವನ್ನೇ ಬದಲಿಸಿತೆಂದರೆ ಅತಿಶಯೋಕ್ತಿಯಾಗಲಾರದು.

ಪವಾಡ ಎಂದರೂ ಸರಿಯೆ; ಲಿಂಗಪ್ಪಾಜಿಯವರು ಕಣ್ಮುಚ್ಚಿ ಮಲಗಿಕೊಂಡಾಗ ಅವರು ಪ್ರಪಂಚದ ಸಮಸ್ತ ವಿದ್ಯಮಾನಗಳನ್ನೂ ತಮ್ಮ ನಾಲಗೆ ಮೇಲೆ ಇದ್ದ ಅಗೋಚರ ಕಣ್ಣುಗಳಿಂದ ಗಮನಿಸುತ್ತಿದ್ದರು. ನಾಲಿಗೆಯಿಂದ ಕೇಳುತ್ತಿದ್ದರು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಅವರ ನಾಲಗೆಯು ಡಿಶ್ ಆ್ಯಂಟೆನಾಕ್ಕಿಂತಲೂ ಶಕ್ತಿಯುತವಾಗಿತ್ತು. ಒಂದು ಬುಲ್ಡೋಜರುಗಿಂತಲೂ ಬಲಿಷ್ಠವಾಗಿತ್ತು. ಅವರು ಉಡಾವಣೆ ಮಾಡುತ್ತಿದ್ದ ಒಂದೊಂದು ಬಯ್ಗಳೂ ಅಣ್ವಸ್ತ್ರಕ್ಕಿಂತಲೂ ಮಿಗಿಲಾಗಿದ್ದವು.

ಅವರು ತಮ್ಮ ಆ ಮಹಿಮಾನ್ವಿತ ನಾಲಗೆಯನ್ನು ಕೇವಲ ಸ್ವಹಿತಾಸಕ್ತಿ ರಕ್ಷಿಸಿಕೊಳ್ಳಲು, ಈಡೇರಿಸಿಕೊಳ್ಳಲು ಮಾತ್ರ ಉಪಯೋಗಿಸಿಕೊಳ್ಳುತ್ತಿರಲಿಲ್ಲ. ಪರರ ಹಿತಾಸಕ್ತಿ ಕಾಪಾಡಲೂ ಅದನ್ನು ಮುಡುಪಿಟ್ಟರು. ಆ ನಾಲಗೆಗೆ ಬಲಿಯಾದ ಅಧಿಕಾರಿಗಳು, ಶ್ರೀಮಂತರು ಅಸಂಖ್ಯಾತ, 'ಮಣಿಯುವವರಿಗೆ ಮಣಿಯುವವು ಕಣೇಕಲ್ಲು ಕೋಣಗಳು' ಎಂಬ ಗಾದೆ ಮಾತು ಚಾಲ್ತಿಗೆ ಬಂದದ್ದು ಆ ಸಂದರ್ಭದಲ್ಲಿಯೇ ಎಂಬುದು ಗಮನಾರ್ಹ.

ಕುಟುಂಬದ ಹಿತರಕ್ಷಣಾರ್ಥವಾಗಿ ಹೆಂಡತಿ ಪಾರವ್ವನ ಸಲಹೆ ಮೇರೆಗೆಯೋ ಗ್ರಾಮದ ತನ್ನ ಹಿತೈಷಿಗಳ ಸಲಹೆ ಮರೆಗೆಯೋ ಲಿಂಗಪ್ಪನವರು ಕ್ರಮೇಣ ಬಯ್ಯುವುದನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡರು. ವೃತ್ತಿಪರ ಬಯ್ಗಳಗಾರರಾದ ಲಿಂಗಪ್ಪಾಜಿ ಬಯ್ಯುವ ಪ್ರಾಕಾರದ ವಿವಿಧ ಆಯಾಮಗಳ ಬಗ್ಗೆ ನಿರಂತರ ಸಂಶೋಧನೆ ನಡೆಸಿದರು. ಬಯ್ಯಿಸಿಕೊಳ್ಳುವ ಬಲಿಪಶುವಿನ ಪುರ್ವಾಪರಗಳ ಕುರಿತು ಅಧ್ಯಯನ ನಡೆಸಿದರು. ಅದಕ್ಕಾಗಿ ಕೆಲವು ಪತ್ತೆದಾರರನ್ನೂ ನೇಮಿಸಿಕೊಂಡರು. ದೇಶ ವಿದೇಶಗಳಿಂದ ತಂಡೋಪತಂಡವಾಗಿ ಆಗಮಿಸಿದ ಬಯ್ಗಳು ಕನ್ನಡೀಕರಣಗೊಂಡು ಅವರ ಹೃದಯದಲ್ಲಿ ಶಾಶ್ವತ ಸ್ಥಾನ ಗಿಟ್ಟಿಸಿಕೊಂಡವು. ಪ್ರತಿಯೊಂದು ಬಯ್ಗಳ ಪದವನ್ನು

ಮಗುವೆಂದು ಭಾವಿಸಿ ಆರೈಕೆ ಮಾಡತೊಡಗಿದರು. ಹೀಗಾಗಿ ಅವರ ಹೃದಯ ಬಯ್ಗಳ ಉದ್ಯಾನವನವಾಯಿತು. ಅವರ ನಾಲಿಗೆ ಎಂಬ ಮೃಗಾಲಯದಲ್ಲಿ ಕ್ರೂರ ಮೃಗಗಳಿಗಿಂತ ಮಿಗಿಲಾದ ವಿವಿಧ ರೀತಿಯ ವಿವಿಧ ಗಾತ್ರದ ಬಯ್ಗಳು ನಾಮುಂದು ತಾಮುಂದು ಘರ್ಜಿಸಲಾರಂಭಿಸಿವು. ಹೀಗಾಗಿ ಕಡಿಮೆ ಕಾಲಾವಧಿಯಲ್ಲಿ ಅವರು ಬಯ್ಗಳ ವಿಶ್ವಕೋಶವಾದರು. ಬಯ್ಗಳ ಗ್ರಂಥ ಬಂಡಾರವಾದರು. ಅಷ್ಟೇ ಏಕೆ ತಾವೊಂದು ಬಯ್ಗಳ ವಿಶ್ವವಿದ್ಯಾಲಯವೇ ಆದರು. ಬಯ್ದೂ ಬಯ್ದೂ ಕಂಠಶೋಷಣೆ ಮಾಡಿಕೊಂಡ ಫಲವೋ; ಸರಸ್ವತಿಯ ಕುಟಿಲ ತಂತ್ರದಿಂದಾಗಿಯೋ ಲಿಂಗಪ್ಪಾಜಿಯವರ ಶ್ವಾಸಕೋಶಗಳೊಳಗೆ ಗೂರಲು ರೋಗ ತಳವೂರಿತು. ದಶಮಾಪುರದ ನಾಟಿವೈದ್ಯರಾದ ಈರಣ್ಣನವರು ನೀನು ಬಯ್ಯೋದು ಬಿಟ್ಟಿ ಎಂದರೆ ಗೂರಲು ರೋಗ ವಾಸಿಯಾಗುತ್ತದೆ ಎಂದು ಹೇಳಿದ್ದಕ್ಕೆ ಇವರು 'ಮಾಡಿಕೊಂಡ ಹೆಂಡತಿಯನ್ನಾದರೂ ಬಿಟ್ಟೇನು? ಆದರೆ ಬಯ್ಯುವುದನ್ನು ಮಾತ್ರ ಬಿಡಲಾರೆ' ಎಂದು ಹೇಳಿ ಎದ್ದು ಬಂದುಬಿಡಬೇಕೆ! ಬಯ್ಯುವುದನ್ನು ಬಿಟ್ಟರೆ ಬಯ್ಗಳ ಗತಿ ಏನಾಗಬೇಡ! ಆರೋಗ್ಯವೆಂಬ ಸ್ವಾರ್ಥದ ಕಾರಣದಿಂದ ಬಯ್ಗಳಿಗೆ ಸೋಡಾ ಚೀಟಿ ಕೊಡುವುದೆಂದರೇನು?

ಗೂರಲು ರೋಗದಿಂದ ವಿಚಲಿತರಾಗದೆ ಲಿಂಗಪ್ಪನವರು ವಿವಿಧ ಬಯ್ಗಳ ಪದಗಳ ನಡುವೆ ಕಸಿ ಮಾಡಿ ಹೊಸ ಹೊಸ ಬಯ್ಗಳನ್ನು ಆವಿಷ್ಕರಿಸಿ ಗ್ರಾಮದ ಆಳುವ ವ್ಯವಸ್ಥೆಯ ಬೆನ್ನಲ್ಲಿ ನಡುಗ ಹುಟ್ಟಿಸಿದರು. ಸತತವಾಗಿ ಎರಡು ಚುಟ್ಟ ಸೇದೋ ಹೊತ್ತಿನವರೆಗೆ ವಾಚಾಮ ಗೋಚರವಾಗಿ ಬಯ್ಯತೊಡಗಿದರೆಂದರೆ ಅವರ ಸುತ್ತ ಒಂದು ಪರಿಶೆಯೇ ನೆರೆದುಬಿಡುತ್ತಿತ್ತು. ಶಿಳ್ಳೆ, ಚಪ್ಪಾಳೆಗಳಿಂದ ಅವರನ್ನು ಹುರಿದುಂಬಿಸುತ್ತಿತ್ತು. ಅವರ ಬಾಯಿಯಿಂದ ಪುಂಖಾನು ಪುಂಖವಾಗಿ ಉದುರುತ್ತಿದ್ದ ಬಯ್ಗಳೆಂಬ ಅನರ್ಘ್ಯ ರತ್ನಗಳನ್ನು ಆಯ್ದು ತಮ್ಮ ತಮ್ಮ ಕಿವಿಗಳಿಗೆ ತುಂಬಿಕೊಳ್ಳುತ್ತಿದ್ದವರೆಷ್ಟೋ ಮಂದಿ. ಅಪಾರಿ, ಸಿದ್ಧ ಮುಂತಾದವರು ಆ ವಿಶಿಷ್ಟ ಪರಿಶೆಯಲ್ಲಿ ಶೇಂಗಾ, ಚಕ್ಕುಲಿ ಮಾರಿ ಹೆಚ್ಚು ಲಾಭ ಸಂಪಾದಿಸಿಕೊಳ್ಳುತ್ತಿದ್ದರು. ಕಾಪಿರೈಟ್ ಆ್ಯಕ್ಟೆಂಬ ದೊಣ್ಣೆನಾಯಕನ ಲಗಾಮು ಇರದಿದ್ದುದರಿಂದ ಅವರ ಬಯ್ಗಳನ್ನು ನಿರ್ಭಿಡೆಯಿಂದ ಅನುಕರಿಸುವ, ಇನ್ನೊಬ್ಬರ ಮೇಲೆ ಪ್ರಯೋಗಿಸುವ ಕೃತಿಚೌರ್ಯವು ಸದರಿ ಗ್ರಾಮದಲ್ಲಿ ಅಷ್ಟೇ ಏಕೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸಾಂಗೋಪಾಂಗವಾಗಿ ನಡೆಯತೊಡಗಿತೆಂಬುದು ಅದು ಬೇರೆ ವಿಷಯ.

ಈ ಪ್ರಕಾರವಾಗಿ ಸದರಿ ಗ್ರಾಮವು ಬಯ್ಗಳ ಕಾಶಿ ಎಂದು ಪ್ರಖ್ಯಾತವಾಯಿತು. ಕಳ, ಬುಳ್ಳ, ನಾರಾಣಿ, ತಿಪ್ಪರೇ ಮೊದಲಾದ ಗ್ರಾಮದ ತ್ರಿಷಷ್ಠಿ ಪುರಾತನರ ಪಾಲಿಗೆ ಲಿಂಗಪ್ಪನವರು ನಾಡೋಜರಾದರು. ಪಾಳೆ ಪ್ರಕಾರ ಅವರು ತಮ್ಮ ನಾಡೋಜನ ಅಂಗರಕ್ಷಕರೂ ಆದರು. ಹೀಗಾಗಿ ಲಿಂಗಪ್ಪಾಜಿ ಸದರಿ ಗ್ರಾಮದಲ್ಲಿ ಹಾಜಿಮಸ್ತಾನನಿಗಿಂತ ಮಿಗಿಲಾದ ಡಾನ್ ಆಗಿ ಪರಿವರ್ತನೆಗೊಂಡರು.

ಬಯ್ಯಿಸಿಕೊಳ್ಳುವುದೆಂದರೆ ಎಲ್ಲಿವರೆಗೆ ಬಯ್ಯಿಸಿಕೊಳ್ಳುವುದು? ಅದಕ್ಕೆಂದೇ ಕೆಲವು ಅಧಿಕಾರಿಗಳು ಶ್ರೀಮಂತರು ಗುಟ್ಟಾಗಿ ಲಿಂಗಪ್ಪಾಜಿಯವರಿಗೆ ಹಫ್ತಾಸಲ್ಲಿಸತೊಡಗಿದರು. ಲಿಂಗಪ್ಪಾಜಿಯವರ ಕಾರ್ಯವ್ಯಾಪ್ತಿ ಕ್ರಮೇಣ ಜಿಲ್ಲೆಯಾದ್ಯಂತ ವಿಸ್ತೃತಗೊಂಡಿತು.

ಲಿಂಗಪ್ಪಾಜಿಯವರನ್ನು, ಅವರ ಬಯ್ಗಳ ಬೆಳ್ಳಿ ಮಹೋತ್ಸವವನ್ನು ಗ್ರಾಮದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. ಆ ಸಮಾರಂಭಕ್ಕೆ ವಿಶ್ವ ವಿದ್ಯಾಲಯಗಳಿಂದ ಆಗಮಿಸಿದ ಜಾನಪದ ವಿದ್ವಾಂಸರು ಅವರನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು. ಅವರ ಪ್ರಯತ್ನ ಫಲವಾಗಿ ಒಂದು ವಿಶ್ವವಿದ್ಯಾಲಯವು 'ಲಿಂಗಪ್ಪಾಜಿಯವರ ಬಯ್ಗಳ ನಿಘಂಟು' ಎಂಬ ಹೆಬ್ಬೊತ್ತಿಗೆಯನ್ನು ಪ್ರಕಟಿಸಿತು. ಆಕಾಶವಾಣಿಯೂ ಅವರ ವಿಶೇಷ ಸಂದರ್ಶನವನ್ನು ಪ್ರಸಾರ ಮಾಡಿತು. ಪಾರಕ್ಕೆ ಒಬ್ಬರಾದರೂ ಬಂದು ಲಿಂಗಪ್ಪಾಜಿಯವರನ್ನು ಕಂಡು ತಾಸುಗಟ್ಟಲೆ ಮಾತಾಡಿ ಹೋಗತೊಡಗಿದರು. ಲಿಂಗಪ್ಪಾಜಿಯವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ಯಾಕೆ ನೀಡಬಾರದೆಂಬ ಒಕ್ಕಣಿಕೆಯುಳ್ಳ ಸುದೀರ್ಘ ಲೇಖನವೊಂದು ಕೆಲವು ದಿನಗಳ ಹಿಂದೆಯಷ್ಟೇ ನಾಡಿನ ಪ್ರಮುಖ ದೈನಿಕದಲ್ಲಿ ಪ್ರಕಟಗೊಂಡಿರುವ ಸಂಗತಿ ಬಹಳ ಜನರಿಗೆ ಪ್ರಾಯಶಃ ತಿಳಿದಿರಲಿಕ್ಕಿಲ್ಲ...

ಶರಭಣ್ಣನ ನಿರ್ದೇಶನದ ಮೇರೆಗೆ ವಿಷಯ ಸಂಗ್ರಹಿಸಿಕೊಂಡು ಬರಲೆಂದು ಕೊತ್ಲಚಿಂತಿಗೆ ಹೋಗಿದ್ದ ಅಕಬರ ಮೌಲಾಲಿಯವರು ಹೇಳಿದ ವಿಷಯವಂತೂ ಅತ್ಯದ್ಭುತವಾಗಿರುವುದು. ಒಂದು ಸನ್ಮಾನ ಸಮಾರಂಭದಲ್ಲಿ ಪಾಲ್ಗೊಳ್ಳಲಿಕ್ಕೆಂದೇ ಲಿಂಗಪ್ಪಾಜಿ ಕೊತ್ಲಚಿಂತಿಗೆ ಹೋಗಿದ್ದು. ಅಲ್ಲಿನ ಹವ್ಯಾಸಿ ಬಯ್ಗಳಗಾರರಿಗೂ; ಲಿಂಗಪ್ಪಾಜಿಯವರಿಗೂ ನಡುವೆ ಮಾತಿನ ಚಕಮಕಿ ನಡೆಯಿತು. ಕೊತ್ಲಚಿಂತಿಯ ಅನಭಿಷಿಕ್ತ ಪಾಳೇಗಾರರಾದ ರಾಜಾ ಪಂಪನಗೌಡರನ್ನು ಬಯ್ದರೆ ಐದುನೂರು ರೂಪಾಯಿ ಬಹುಮಾನ ಕೊಡುವುದಾಗಿ ಒಬ್ಬ ಘೋಷಿಸಿಯೇಬಿಟ್ಟ. ಆ ಆಹ್ವಾನವನ್ನು ಲಿಂಗಪ್ಪಾಜಿ ಸ್ವೀಕರಿಸಿಯೇಬಿಟ್ಟರು. ಐದು ಸಹಸ್ರ ಎಕರೆ ಭೂಮಿಗೆ ಒಡೆಯರೂ, ಕನಿಷ್ಠಪಕ್ಷ ಐವತ್ತರವತ್ತು ಖೂನಿ ಮಾಡಿಸಿರುವವರೂ ಆದ ಗೌಡರ ಎದುರಿಗೆ ಚಪ್ಪಲಿ ಮೆಟ್ಟಿಕೊಂಡು ಅಡ್ಡಾಡಲು ದೊಡ್ಡ ದೊಡ್ಡವರೇ ಅಂಜುತ್ತಿರಬೇಕಾದರೆ ಹೋಗಿ ಬಯ್ಯುವುದೆಂದರೇನು! ಒಪ್ಪಿಕೋಬೇಡಿ ಎಂದು ಯಾರು ಎಷ್ಟು ಹೇಳಿದರೂ ಕೇಳದೆ ಲಿಂಗಪ್ಪನವರು ಸರಸರ ಅಂತ ಸೀದ ಹೋಗಿ ರಾಜಾ ಪಂಪನಗೌಡರೆದುರು ನಿಂತರು. ಇದ್ದಕ್ಕಿದ್ದಂತೆ ಅವರನ್ನು ಬಯ್ಯಲು ಶುರು ಮಾಡಿದರು. ಅದೂ ಒಳಹೊರಗೆ ಜನವೋ ಜನ, ಸತತ ಒಂದು ಗಂಟೆ ಕಾಲ; ಅದೂ ಉಪಯೋಗಿಸಿದ ಶಬ್ದ ಉಪಯೋಗಿಸದೆ ಲಿಂಗಪ್ಪಾಜಿಯವರ ಬಯ್ಗಳಿಂದ ಸಂಪ್ರೀತರಾದ ಜಮೀನ್ದಾರರು ಕುಲುಕುಲು ನಗುತ್ತ ಎಂದು ಬಂದು ಅವರನ್ನು ಆಲಂಗಿಸಿಕೊಂಡರು. "ಲಿಂಗಪ್ಪನವರೆ... ಲೋಕ ವಿಖ್ಯಾತ ಬಯ್ಗಳಗಾರರಾದ ನಿಮ್ಮ ಪ್ರತಿಭೆ ಅಮೋಘವಾದುದು. ನಿಮ್ಮಿಂದ ಬಯ್ಯಿಸಿಕೊಳ್ಳಬೇಕೆಂಬ ಮಹದೇಚ್ಛೆ ನಮಗೆ ಬಹಳ ದಿನಗಳಿಂದ ಇತ್ತು. ಈಗ ಅದು ಈಡೇರಿತು" ಎಂದು ಹೃದಯ ತುಂಬಿ ಶ್ಲಾಘಿಸಿದರು. ಅರ್ಧ ಸೇರು ತೂಕದ ಬೆಳ್ಳಿ ಕಡಗವನ್ನು ಬಹುಮಾನ ರೂಪದಲ್ಲಿ ಕೊಟ್ಟಿದ್ದೂ ಅಲ್ಲದೆ ತಾವೇ ಖುದ್ದ ಜೊತೆಯಲ್ಲಿ ಕೂತಿದ್ದು ಹೋಳಿಗೆ ಊಟವನ್ನು ಮಾಡಿಸಿ ಹೃದಯ ವೈಶಾಲ್ಯತೆಯನ್ನು ಮೆರೆದರು. ಅವರ

ಈ ಉದಾರ ವರ್ತನೆಯಿಂದ ಲಿಂಗಪ್ಪನವರು ಪಾತಾಳಕ್ಕಿಳಿದು ಹೋಗಿಬಿಟ್ಟರು. ಪಶ್ಚಾತ್ತಾಪದಿಂದ ತಮ್ಮನ್ನು ತಾವು ಸಾಕಷ್ಟು ನಿಂದಿಸಿಕೊಂಡರು. ಮುಂದೆಯೂ ತಾವು ಯಾರೊಬ್ಬರನ್ನು ಬಯ್ಯುವುದಿಲ್ಲವೆಂದು ಶಪಥ ಮಾಡಿ ತಮ್ಮೂರಾದ ಕಣೇಕಲ್ಲಿಗೆ ಮರಳಿದರು.

ಅವರ ಈ ನಿರ್ಧಾರದಿಂದ ಅವರ ಹೃದಯದಲ್ಲಿ ಆಶ್ರಯಪಡೆದಿದ್ದಂಥ ಅವರಿವರ ಮೇಲೆ ಹರಿಹಾಯುತ್ತಿದ್ದಂಥ ಬಯ್ಗಳ ಶಬ್ದಗಳು ''ಅಯ್ಯೋ ತಮಗಿನ್ನಾರು ದಿಕ್ಕು'' ಎಂದು ದುಃಖ ಮಾಡಿದವು. ಅವುಗಳು ಎಷ್ಟು ಕಾಡಿದರೂ ಬೇಡಿದರೂ ಲಿಂಗಪ್ಪಾಜಿ ತಮ್ಮ ನಿರ್ಧಾರದಿಂದ ವಿಚಲಿತರಾಗಲಿಲ್ಲ. ''ಇನ್ನು ನನ್ನ ಹಾಗೂ ನಿಮ್ಮ ಋಣ ತೀರಿತ್ರಪ್ಪಾ. ಬಂದ ದಾರಿಗೆ ಸುಂಕವಿಲ್ಲವೆಂದು ಭಾವಿಸಿ ಹೊರಟುಹೋಗಿ ದಯವಿಟ್ಟು'' ಎಂದು ಕೇಳಿಕೊಂಡರಲ್ಲದೆ ಪ್ರತಿಯೊಂದು ಬಯ್ಗಳನ್ನು ತಮ್ಮ ಹೃದಯದಿಂದ ಹೊರಹಾಕಿದರು. ಬಯ್ಗಳ ಪೈಕಿ ಅತಿ ಕನಿಷ್ಠ ಪದವಾದ 'ಲೇ' ಎಂಬ ಪದವು ''ಯಜಮಾನರೇ.. ಕಾಲ ಹೆಂಗೆ ಹೋಗಿ ಹೆಂಗೆ ಬರುವುದೋ, ದಯವಿಟ್ಟು ನನ್ನೊಬ್ಬನಿಗಾದರೂ ನಿಮ್ಮ ಹೃದಯದಲ್ಲಿರಲು ಆಸ್ಪದ ಮಾಡಿಕೊಡ್ರಿ'' ಎಂದು ಸರ್ಪಾಸ್ತ್ರದಂತೆ ಪರಿಪರಿಯಿಂದ ಕೇಳಿಕೊಂಡಿತು. ಅದಕ್ಕಿದ್ದು ಲಿಂಗಪ್ಪಾಜಿಯವರು ''ಏನು ಬಂದರೂ ಎದುರಿಸಲಿಕ್ಕೆ ನಾನು ತಯಾರಿದ್ದೀನಿ ಕಣಪ್ಪಾ... ನಿನ್ನ ಅಗತ್ಯವೂ ನನಗಿಲ್ಲ... ನೀನು ಕೂಡ ಹೊರಟು ಹೋಗಿಬಿಡು'' ಎಂದು ಬಲವಂತದಿಂದ ಅದನ್ನೂ ಹೊರಗೆ ಕಳಿಸಿಬಿಟ್ಟು ನಿರಮ್ಮಳಾದರು. ಹೀಗಾಗಿಯೇ ಅವರು ತಮ್ಮ ಹೆಂಡತಿ ಎಷ್ಟು ಕೇಳಿಕೊಂಡರೂ ಏನ್ರೀ ಗೀನ್ರಿ ಅಂದರೆ ಹೊರತು ಲೇ ತಾಲೆ ಅಂತ ಮಾತ್ರ ಅನ್ನಲಿಲ್ಲ.

ಶರಭಣ್ಣನೊಂದೇ ಅಲ್ಲ, ಗ್ರಾಮದ ಅನೇಕರು ನಿರ್ಧಾರ ಬದಲಿಸುವಂತೆ ವಿನಂತಿಸಿಕೊಂಡರು, ಸತ್ಯಾಗ್ರಹವನ್ನೂ ಮಾಡಿದರು. ಆದರೆ ಲಿಂಗಪ್ಪಾಜಿ ತಮ್ಮ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. ಶೇಷಾಯುಷ್ಯವನ್ನು ಸಾರ್ಥಕ ರೀತಿಯಲ್ಲಿ ಕಳೆಯಬೇಕೆಂದು ನಿರ್ಧರಿಸಿದ ಅವರು ಸದರಿ ಗ್ರಾಮದಲ್ಲಿ ಸಾಲೇಗುಡಿಯೊಂದನ್ನು ಆರಂಭಿಸಿದರು. ಶಿಷ್ಯತ್ವ ಸ್ವೀಕರಿಸಿದ ಮಕ್ಕಳಿಗೆ ಮಾತೇ ಜೋತಿರ್ಲಿಂಗ, ನುಡಿದರೆ ಮುತ್ತಿನ ಹಾರದಂತಿರಬೇಕು, ಮಾತು ಆಡಿದರೆ... ಇವೇ ಮೊದಲಾದ ನೀತಿ ವಾಕ್ಯಗಳ ಮಹತ್ವವನ್ನು ಹೇಳಿಕೊಟ್ಟರು. ಅವರ ಸಾಲೆ ಗುಡಿಯಲ್ಲಿ ನುರುಪಡಿಯಾದ ಎಷ್ಟೋ ಮಂದಿ ನಾಡಿನ ಅನೇಕ ಕಡೆ ನೌಕರರಾಗಿ, ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವರು ಈಗಲೂ.

ಅಂಥ ಮಾತೇ ಜೋತಿರ್ಲಿಂಗಪ್ಪಾಜಿಯವರ ಏಳನೇ ಪುಣ್ಯ ತಿಥಿಯನ್ನು ಬರುವ ಮಾಘಮಾಸದಲ್ಲಿ ಕಣೇಕಲ್ಲು ಗ್ರಾಮವು ಬಹು ವಿಜೃಂಭಣೆಯಿಂದ ಆಚರಿಸಲಿದೆ. ಅದರಲ್ಲಿ ಸಾವಿರಾರು ಮಂದಿ ಶಿಷ್ಯರು, ಅಧಿಕಾರಿಗಳು ಭಾಗವಹಿಸುವ ನಿರೀಕ್ಷೆಯಲ್ಲಿದೆ ಕಣೇಕಲ್ಲು ಗ್ರಾಮವು.

★★★

ರಾ.ಶಿ. ಅವರ ಜೊತೆ ಕೆಲವು ಅನುಭವಗಳು

– ಪ್ರಕಾಶ್

ರಾ.ಶಿ. ಅವರ ಜತೆ ಮಾತಾಡುವಾಗಲೆಲ್ಲ ಹಲವಾರು ಜೋಕುಗಳು, ಚುಟುಕಗಳು, ನಗೆ ಬಾಣಗಳು ಬಹು ಸಾಧಾರಣ. ಇವು ವೈಯಕ್ತಿಕವಾದ್ದರಿಂದ, ಎಲ್ಲೂ ಪ್ರಕಟವಾಗಿಲ್ಲ. ಇಂತಹ ಸನ್ನಿವೇಶಗಳನ್ನ ಆಧಾರಿಸಿದ ಈ ನೆನಪಿನ ದೋಣಿಯಲ್ಲಿ ವಿಹರಿಸೋಣ ಬನ್ನಿ.

★★★

ನಾನು ಎಂ.ಡಿ. ಮುಗಿಸಿ, ದೆಹಲಿಯಿಂದ ಬೆಂಗಳೂರಿಗೆ ವಾಪಸ್ ಬಂದಿದ್ದೆ. ಒಂದು ಸಂಜೆ, ನಗರದ ವ್ಯಾಪಾರಿಯೊಬ್ಬರ ಮನೆಯಿಂದ ಫೋನ್ ಬಂತು. ರಾ.ಶಿ. 'ನನಗೆ ಬರುಕ್ಕೆ ಆಗುಲ್ಲ, ನನ್ನ ಮಗನ್ನ ಕಳಿಸ್ತೀನಿ' ಎಂದರು. ಅವರ ಕಾರು ಬಂತು; ಮನೆಗೆ ಹೋಗಿ, ರೋಗಿಯನ್ನ ನೋಡಿ ಬಂದೆ. ನನ್ನ ಪುಣ್ಯಕ್ಕೆ ಆತ ಆರೋಗ್ಯ ಮುಖನಾದ. ಮನೆಗೆ ಬಂದು ನಾನು, 'ಅಪ್ಪ, ಅವರ ಮನೆಯಲ್ಲಿ ಎರಡು ಹಳೇ ರೀಡರ್ಸ್ ಡೈಜೆಸ್ಟ್ ಬಿಟ್ಟರೆ ಯಾವ ಪುಸ್ತಕವೂ ಕಾಣಲಿಲ್ಲ!' ಅಂದೆ. ನಂ ಮನೇಲಿ ನೂರಾರು ಪುಸ್ತಕಗಳ ಜತೆ ಬೆಳೆದ ನನ್ನ ಪ್ರಶ್ನೆ ಸಹಜವೇ. ರಾ.ಶಿ. ನಕ್ಕರು. 'ಅಲ್ಲ ಕಣೋ ಬೆಪ್ಪೆ, ಜೀವನದಲ್ಲಿ ಬೇಕಾದ್ದು ಎರಡೇ ಮುಖ್ಯ ಪುಸ್ತಕಗಳು! ಒಂದು ಪಾಸ್‌ಬುಕ್, ಇನ್ನೊಂದು ಚೆಕ್‌ಬುಕ್! ಅವನ ಹತ್ರ ಇದೆ! ನಿನ್ನ ಹತ್ರ ಇಲ್ಲ!''

★★★

ಕ್ಲಿನಿಕ್‌ನಲ್ಲಿ ಕೂತಿದ್ದೆ. ರಾ.ಶಿ. ಅವರು ಪೇಶೆಂಟ್ಸ್ ನೋಡುವ ವೈಖರಿಯನ್ನ ನೋಡೋಣ ಅಂತ. ಆಗ ಒಬ್ಬ ಯುವಕ ನಗುತ್ತ ಬಂದ. 'ನನಗೆ ಮದುವೆ ಸಾರ್! ಬರಲೇಬೇಕು' ಅಂತ ಇನ್‌ವಿಟೇಷನ್ ಕೊಟ್ಟ. ರಾ.ಶಿ. ನಗುತ್ತ 'ಯಾಕೋ, ಹೋದವಾರದ ತನಕ ಚೆನ್ನಾಗೇ ಇದ್ಯಲ್ಲ!' ಅಂದರು. ಮನೆಗೆ ಬಂದ ಮೇಲೆ ಅವರನ್ನ ಟೀಕಿಸಿದೆ, ಇದೇನು ಹೀಗೆ ಹೇಳಿದಿರಲ್ಲ ಅಂತ. 'ಅಯ್ಯೋ, ಅವನು ಈಗ ಇರೋ ಲೋಕದಲ್ಲಿ, ನಾನು ಹೇಳಿದ್ದು ಅವನಿಗೆ ಎಲ್ಲಿ ಕೇಳುತ್ತೆ ಕಣೋ' ಅಂದು ನಕ್ಕರು.

★★★

ಹೊಟ್ಟೆನೋವು ಅಂತ ಆತ ಕ್ಲಿನಿಕ್ಕಿಗೆ ಬಂದ. ಆತನಿಗೆ ಮಿಕ್ಸ್ಚರ್ ಮಾಡಿಸಿ, ಕೊಟ್ಟರು. ಆ ಭೂಪ, ಎರಡೇ ನಿಮಿಷದಲ್ಲಿ ಓಡಿ ಬಂದ. 'ಡಾಕ್ಟ್ರೇ, ನಾನು ಬಾಟಲಿನ ಮೇಲೆ ಬರೆದಿದ್ದನ್ನ ಓದಲಿಲ್ಲ. ಕುಲುಕದೇ ಕುಡಿದುಬಿಟ್ಟೆ! ಏನ್ಮಾಡಲಿ?' ಎಂದ. ರಾ.ಶಿ. ನಸುನಗುತ್ತ, ''ಪರವಾಗಿಲ್ಲ ಕಣೋ! ಆಟೋದಲ್ಲಿ ಮನೆಗೆ ಹೋಗು!' ಅಂದರು!

★★★

ಹಿಂದೆ ಒಬ್ಬ ಲಾಯರ್ ಇದ್ದ. ಅವನು ಮಾಡಿದ್ದೆಲ್ಲ ನೀತಿ ಬಾಹಿರ. ಅವನ ಕುಪ್ರಸಿದ್ಧಿ ಎಲ್ಲರಿಗೂ ಗೊತ್ತಿತ್ತು. ಅಪಾರವಾದ ಧನ ಸಂಗ್ರಹಿಸಿದ್ದ. ಅವನಿಗೆ ಏನು ತೋಚಿತೋ, ಒಂದು ಸಂಜೆ ನಂ ಮನೆಗೆ ಬಂದ. (ರಾ.ಶಿ. ಅನಾರೋಗ್ಯದಿಂದ ಬಳಲುತ್ತಿದ್ದರು ಅಂತ ಎಲ್ಲರಿಗೂ ಗೊತ್ತಿತ್ತು). ಲಾಯರ್ ಬಂದಿದಾರೆ, ಅಂತ ಹೇಳಿದೆ. ಅವನು ರಾ.ಶಿ. ಕಾಲಿಗೆ ಬಿದ್ದು, ಸಾಷ್ಟಾಂಗ ನಮಸ್ಕಾರ ಮಾಡಿದ! ನಾನು ಕುತೂಹಲದಿಂದ ನೋಡುತ್ತಿದ್ದೆ. ಪರಿಸ್ಥಿತಿ ಸಂದಿಗ್ಧ; ಕಾಲಿಗೆ ಬಿದ್ದು Blessings ಕೇಳುತ್ತಿದ್ದವನಿಗೆ ಆಶೀರ್ವಾದ ಮಾಡುವುದು ಧರ್ಮ; ಆದರೆ ಈತನ ಜೀವನ ಅಧರ್ಮಭರಿತ! ರಾ.ಶಿ. ಅವನ ತಲೆಯಮೇಲೆ ಕೈಗಳನ್ನಿರಿಸಿದರು. 'ನಿನ್ನ ಮಕ್ಕಳು, ನಿನಗಿಂತಲೂ ಶ್ರೇಯಸ್ಕರವಾಗಿ ಬಾಳಲಿ' ಎಂದು ಹರಸಿದರು!!

★★★

ನಾನು ಡೆಲ್ಲಿಯಲ್ಲಿ ಓದುತ್ತಿದ್ದೆ. Aiims ನಲ್ಲಿ, ಎಂ.ಡಿ. ಮಾಡುವಾಗ Thesis ಮಾಡಬೇಕಿತ್ತು. ನನ್ನ ಗೈಡು, ಪ್ರಸಿದ್ಧರಾಗಿದ್ದ ಡಾ|| ಅಹುಜ. ಅವರು, ನನಗೆ ರೇಡಿಯೋ ಆಕ್ಟಿವ್ ಐಸೋಟೋಪ್ (ಕ್ಯಾಲ್ಸಿಯಂ) ಉಪಯೋಗಿಸಿ ಮಾಡುವ ಸಬ್ಜೆಕ್ಟ್ ಕೊಟ್ಟರು. ನನಗೆ ಭಯ! ಮನೆಗೆ ಕಾಗದ ಬರೆದೆ. 'ಈ ಕ್ಯಾಲ್ಸಿಯಂ ಆಕಸ್ಮಾತ್ ದೇಹಕ್ಕೆ ಹೋದರೆ ಬಹುಕಾಲ ಇದ್ದು ದುಷ್ಪರಿಣಾಮ ಆಗಬಹುದು; ಏನು ಮಾಡಲಿ?' ಮನೆಯಿಂದ ಎರಡೇ ದಿನದಲ್ಲಿ ಉತ್ತರ ಬಂತು. 'ಪ್ರಿಯ ಪ್ರಕಾಶ್, ರೇಡಿಯೋ ಆಕ್ಟಿವ್ ಲವಣದಿಂದ ಪ್ರಯೋಗಗಳನ್ನ ಮಾಡಬಹುದು. Knowing our history, any mutation can only be for the better!'

★★★

ರಸದೌತಣ

ಅರಮನೆಯಲ್ಲಿ ತುಂಬಿರುತ್ತದೆ ರಸದೌತಣ
ಉಣುವವರ ಬಡಿಸುವವರ ನಡುವೆ ಮೌನಬಾಣ
ಕತ್ತಿ ಚುಚ್ಚಲು ಮೈಗೆ ನೆತ್ತರುಕ್ಕಿ ಬರುವಂತೆ
ಮೌನಬಾಣವ ಭೇದಿಸಿ ಬರಲಿ ನಗೆ ಮಿಂಚಿನಂತೆ

ಬೇಲೂರು ರಾಮಮೂರ್ತಿ

ಕನಸಿನ ಟೈಂ ಪಾಸ್ ಕಥೆ

– ಬೇಲೂರು ರಾಮಮೂರ್ತಿ

ದೀಪಂಜ್ಯೋತಿ ಪರಬ್ರಹ್ಮ, ದೀಪಂಜ್ಯೋತಿ ನಮೋಸ್ತುತೆ, ದೀಪೇನ ಪರತೇ ಪಾಪಂ ಸಂಧ್ಯಾದೀಪಂ ನಮೋಸ್ತುತೇ ಅಂತ ಸ್ತೋತ್ರ ಗೊಣಗಿಕೊಂಡು ಸೀತತ್ತೆ ಲೋಟದಲ್ಲಿ ಕಾಫಿ ತಂದು ಸಿಂಗಾರಯ್ಯನವರಿಗೆ ಕೊಟ್ಟರು. ''ಟೈಮು ಅಂದ್ರೆ ಟೈಮು ಕಣೆ.... ಅಲ್ಲ ನನ್ನ ಕೈ ಹಿಡಿದ ಈ ಮೂವತ್ತು ವರ್ಷದಿಂದ ನೋಡ್ತಿದೀನಿ ಒಳ್ಳೆ ಗಾಣದೆತ್ತಿನ ಹಾಗೆ ದುಡೀತಾ ಇದೀಯ. ನಿನಗೆ ಸ್ವಲ್ಪವೂ ಬೇಜಾರಾಗೋಲ್ವೇನೇ'' ಅಂದು ಹೆಂಡತಿಯ ಒರಟಾದ ಕೈ ಹಿಡಿದು ಹತ್ತಿರ ಕೂರಿಸಿಕೊಂಡರು. ''ಅಯ್ಯೋ ಬೇಜಾರು ಅಂತ ಕೂತಿದ್ರೆ ನಿಮ್ಜೊತೆ ಸಂಸಾರ ಮಾಡೋಕ್ಕಾಗ್ತಿತ್ತೆ, ಆರು ಮಕ್ಕಳನ್ನ ಹೆರೋಕ್ಕೆ ಆಗ್ತಿತ್ತೆ, ಮೂರು ಹೆಣ್ಣು ಮಕ್ಕಳಿಗೆ ಬಾಣಂತನ ಮಾಡಕ್ಕಾಗ್ತಿತ್ತೇ... ಎಲ್ಲಕ್ಕಿಂತ ಹೆಚ್ಚಾಗಿ ನಿಮ್ಮ ತುಂಟತನಾನ ಸಹಿಸ್ಕೊಳ್ಳೋಕಾಗ್ತಿತ್ತೆ... ಅದೊಂದ್ ಕಡೆಗೆ ಇದೊಂದ್ ಕಡೆಗೆ... ಇಲ್ಲಿ ಈ ಪೂಸಿ ಹೊಡೆಯೋದು ಯಾತಕ್ಕೊ...'' ಅಂದು ರಾಗ ಎಳೆದರು ಸೀತತ್ತೆ. ''ಏನಿಲ್ಲ ಒಂದು ನೂರು ರೂಪಾಯಿ ಕೊಟ್ರೆ ಹೀಗೆ ಹೋಗಿ ಹಾಗೆ ಬಂದ್ ಬಿಡ್ತೀನಿ... ಸುಬ್ಬು ಬಹಳ ದಿನದಿಂದ ಕರೀತಿದಾನೆ, ಹೋಗ್ದಿದ್ರೆ ಹೆಂಡ್ತಿಗೆ ಹೆದರ್ಕೊಂಡು ಮನೇಲಿ ಕುಕ್ಕರ ಬಡಿದಿದಾನೆ ಅಂತ ಹಂಗಿಸ್ತಾನೆ'' ಅಂದು ಒಂದು ಕೈನಿಂದ ಕಾಫಿ ಗುಟುಕರಿಸ್ತಾ ಇನ್ನೊಂದು ಕೈನಿಂದ ಸೊಂಟ ಕೆರ್ಕೊಂಡ್ರು.

''ಆಹಹಾ... ಅಲ್ಲಿ ಹೋಗಿ ಇಸ್ಪೀಟ್ ಬಡಿಯೋಕೆ ಏನು ಪ್ರವರ, ಏನ್ ಕಥೆ... ಅಲ್ರೀ ಹವ್ಯಾಸಗಳನ್ನ ಇನ್ನೊಬ್ಬರ ಮುಲಾಜಿಗೆ ಕಟ್ಟುಬಿದ್ದು ಬೆಳೆಸ್ಕೊಳ್ಳೋಕಾಗುತ್ತೇನ್ರೀ... ಇವತ್ತು ಇಸ್ಪೀಟಿಗೆ ಕರೆದ, ನಾಳೆ ಜೂಜಿಗೆ ಕರೀತಾನೆ ನಾಡಿದ್ದು ಇನ್ನೊಂದಿಕ್ಕೆ ಕರೀತಾನೆ. ಆದ್ರೆ ಯಾವುದಕ್ಕೆ ಹೋಗಬೇಕು, ಯಾವುದಕ್ಕೆ ಬೇಡ ಅನ್ನೋ ಪರಿಜ್ಞಾನ ನಿಮಗಿರಬೇಕಲ್ವ'' ಅಂದರು ಸೀತತ್ತೆ. ''ಅಲ್ವೆ ನಾನೇ ಸಂಪಾದನೆ ಮಾಡಿ ನಿನ್ನ ಕೈಲಿ ಕೊಟ್ಟ ಹಣಾನ ಹಿಂದಕ್ಕೆ ಪಡೀಬೇಕಾದ್ರೆ ಇಂಥಾ ಮಾತೆಲ್ಲ ಕೇಳಬೇಕಾಯ್ತಲ್ಲೇ... ಈಗೇನು ಕೊಡ್ತೀಯೋ ಇಲ್ವೋ'' ಅಂದು ತುಟಿಯೂದಿಸಿದರು. ''ಹಾಳಾಗಿ ಹೋಗ್ಲಿ ಅಂತ್ ಕೊಡ್ತಿದೀನಿ. ಆದರೆ ಇನ್ನೊಂದಿನ ಜಪ್ಪಯ್ಯ ಅಂದ್ರೂ ಕೊಡಲ್ಲ'' ಅಂದು ಸೀತತ್ತೆ ಸೊಂಟದಿಂದಲೇ ನೂರು ರೂಪಾಯಿನ ನೋಟು ಗಂಡನ ಕೈಗೆ ಕುಕ್ಕಿದಾಗ ಆಹಾ ಬೆಚ್ಚಗಿದೆ ಅಂತ ನಕ್ಕು ಜೋಬಿಗಿರಿಸಿದ ಸಿಂಗಾರಯ್ಯ ನೋಡು ಇವತ್ತು ಇಸ್ಪೀಟಲ್ಲಿ ಬಂದಿದ್ದೆಲ್ಲ ನಿಂಗೇ ಅಂದು ಆಚೆ ನಡೆದರು.

ಸುಬ್ಬ ಅಂಡ್ ಕಂಪನಿ ಸಿಂಗಾರಯ್ಯನನ್ನು ಹಾರ್ದಿಕವಾಗಿ ಬರಮಾಡಿಕೊಂಡು ಜಾಗ ಮಾಡಿಕೊಟ್ಟರು. ಈ ನನ ಮಕ್ಕಳು ನನ್ನ ಬೋಳಿಸೋಕೆ ಚೌರದವನು ಸೋಪು, ಕತ್ತಿ ಬ್ರಷ್ಷು ರೆಡಿ ಮಾಡ್ಕೊಂಡ ಹಾಗೆ ಮಾಡ್ಕೊತಿದಾರೆ ಅಂದು ಸಿಂಗಾರಯ್ಯ ಚಕ್ಕಳಮಕ್ಕಳ ಹಾಕ್ಕೊಂಡು ಕೂತರು. ಮಾರ್ತಾಂಡಿ ಬಳಿ ಕೈ ಚಾಚಿ ಒಂದು ಚಿಟಿಕೆ ನಶ್ಯ ಮೂಗಿಗೇರಿಸಿ

ಬೆರಳು ಕೊಡವಿ ''ಎಲೆ ಹಾಕ್ಕೋ ನಂಗೂ'' ಅಂದರು. ನಾಕು ರೂಪಾಯಿ ಬುಕ್ಕು, ಡ್ರಾಪು ಒಂದು ರೂಪಾಯಿ. ಎರಡು ಸೀಕ್ವೆನ್ಸ್ ಇಲ್ದಿದ್ರೆ ಬುಕ್ಕು ಅಂದು ಆಟದ ನಿಯಮ ಒದರುತ್ತ ಎಲೆ ಉದುರಿಸಿದ ಮಾರ್ತಾಂಡಿ.

''ಇವತ್ತು ಆಟದಲ್ಲಿ ಇಷ್ಟೊತ್ತಿಗೆ ಯಾರು ಅಪ್ಪು ಯಾರು ಡೌನು'' ಅಂತ ವಿಚಾರಿಸಿದರು ಸಿಂಗಾರಯ್ಯ. ಅದುವರೆವಿಗೂ ಮಗುಮ್ಮಾಗಿ ಕೂತಿದ್ದ ಶಾಮಣ್ಣಿ ನನ್ದು ನೂರು ರೂಪಾಯಿ ಹೋಗಿದೆ... ಸುಬ್ಬನಿಗೆ... ಮಾರ್ತಾಂಡಿದು ನೂರ ಇಪ್ಪತ್ನಾಲ್ಕು ಹೋಗಿದೆ ಅದೂ ಸುಬ್ಬನಿಗೆ ಅಂದು ವದರಿಸಿದ. ''ಅದಿಕ್ಕೆ ಸುಬ್ಬ ಉಬ್ಬಿರೋದು... ಏನಮ್ಮ ಈ ಖುಷೀಲಿ ಏನಿಲ್ವ'' ಅಂದ ಸಿಂಗಾರಯ್ಯ. ''ಬೀರು ತರಿಸ್ತೀನಿ ಕುಡೀತೀಯಾ'' ಅಂತ ಸುಬ್ಬ ಅಯ್ಯೋ ಬೇಡಪ್ಪ... ಆಮೇಲೆ ನನ್ ಹೆಂಡ್ತಿ ಕಾಲಿಂದ ಕೈಗೆ ತಗೋತಾಳೆ ಅಂತ ಸಿಂಗಾರಯ್ಯ ಅಂದ್ರೆ ಶಾಮಣ್ಣ ''ಏನು ಗೆಜ್ಜೆನಾ'' ಅಂತ ಕೇಳಿದ ಮಾರ್ತಾಂಡಿ ''ತರ್ಲಮ್ಮ... ಬಹಳ ದಿನ ಆಯ್ತು ಕುಡ್ದು... ನಾವು ಹೋಗೋ ಹೊತ್ಗೆ ವಾಸ್ನೆ ಹೊರಟು ಹೋಗಿರುತ್ತೆ. ಒಂದ್ ಪಕ್ಷ ಏನ್ ವಾಸ್ನೆ ಅಂದ್ರೆ ಅಯ್ಯರ್ ಅಂಗ್ಡೀಲಿ ಬಜ್ಜಿ ತಿಂದೆ ಅದಿಕ್ಕೆ ಸಖತ್ ಬೆಳ್ಳುಳ್ಳಿ ಹಾಕಿದ್ದ ಅಂತ ಒಂದು ಬುರುಡೆ ಬಿಟ್ರಾಯ್ತು'' ಅಂದ. ''ಓಹೋ ಬುರುಡೆ ಬಿಟ್ಟಂಗೇಯ.... ನನ್ ಹೆಂಡ್ತಿ ರಾತ್ರಿ ಹತ್‌ಗಂಟೆ ಮೇಲೆ ಮನೆಗೆ ಹೋದ್ರೆ ಮುತ್ತಿಟ್ಟೇ ಸ್ವಾಗತಿಸೋದು. ಕೈಲಾಸಂ ಹೇಳಿದ ಹಾಗೆ as a matter of inspectionnu. ಅಂದು ಶಾಮಣ್ಣಿ ಒದರಿದ. ''ಅಂದ್ರೆ ಹತ್ ಗಂಟೆ ಮೇಲೆ ನಿಮ್ಮನೆಗೆ ಯಾರು ಬಂದ್ರೂ ಹಾಗೇನಾ'' ಅಂತ ಕೇಳಿ ಸಖತ್ ಉಗಿಸಿಕೊಂಡ ಸುಬ್ಬ. ಸಿಂಗಾರಯ್ಯ ''ಆದ್ರೆ ನನ್ ಹೆಂಡ್ತಿ ಒಂದಿನಾನೂ ಆ ರೀತಿ inspection ಮಾಡಿಲ್ಲ ಅವಳದ್ದು ಏನಿದ್ರೂ real affectionಉ, ತರಿಸಯ್ಯ ಬೀರು ಇವತ್ತು ಹಾಕೇ ಬಿಡ್ತೀನಿ ಬಹಳ ದಿವಸ ಆಯ್ತು ಯಾಕೋ ಮೈ ಉಷ್ಣ ಅನಿಸ್ತಿದೆ'' ಅಂದು ಧೀರನಂತೆ ಎದೆಯುಬ್ಬಿಸಿದ ಸರಿ ಷುರುವಾಯ್ತು ಸಮಾರಾಧನೆ ಜೊತೆಗೆ ರೆಮ್ಮಿ ಅಂಡ್ ಷೋ.

ಅವತ್ತೇನೋ ಸಖತ್ ಅದೃಷ್ಟ ಸಿಂಗಾರಯ್ಯನಿಗೆ... ಮೊದಲೊಂದೆರಡು ರೌಂಡು ಡ್ರಾಪು... ಆಮೇಲೆ ನಿಲ್ಲು... ಆಮೇಲೆ ಬರೋಕೆ ಷುರುವಾಯ್ತು ನೋಡಿ... ಬೀರು ತಂದ್ ಕೊಟ್ಟ ಚಿಲ್ಟಾರಿಗೆ ಮೆತ್ತಗೆ ನಮ್ಮನೆಗೆ ಹೋಗಿ ''ಯಜಮಾನರು ನಾಳೆ ನಿಮಗೆ ಹೊಸ ಸೀರೆ ಕೊಡಿಸ್ತಾರೆ ಅಂತ ಹೇಳು'' ಅಂತ ಹೇಳಿ ಕಳಿಸಿ ಅವನ ಕೈಗೆ ಒಂದು ರೂಪಾಯಿ ಬಿಲ್ಲೆ ಇಟ್ಟ. ಅವನು ಹೋಗಿ ಬರೋ ಹೊತ್ಗೆ ಮತ್ತೆ ''ನಿಮ್ಮ ಮನೆ ನಲ್ಲಿನೂ ನಾಳೇನೇ ರಿಪೇರಿ ಮಾಡಿಸ್ತಾರಂತೆ' ಅಂತ ಹೇಳು ಅಂದು ಎರಡು ರೂಪಾಯಿ ಕೈಗಿಟ್ಟ. ಸಿಂಗಾರಯ್ಯನ ಕೈ ಮುಂದಾಗೇ ಇತ್ತು ಇತ್ತ ಚಿಲ್ಟಾರಿಯಿಂದ ಘಳಿಗೆಗೊಂದು ವರ್ತಮಾನ. ಸೀತತ್ತೆಗೆ ಸೀರೆ, ಹೊಸಾ ಕಾಲ್ಗೆಜ್ಜೆ, ಹೊಸ ಕನ್ನಡಕದ ಫ್ರೇಮು, ಹೊಸ ಗಡಿಯಾರ ಏನು ಲಿಷ್ಟು ಬರ್ತನೇ ಇತ್ತು. ಒಂದು ನೂರು ರೂಪಾಯಿಂದ ಇಷ್ಟೆಲ್ಲ ಸಾರ್ಥಕ ಆಗೋಹಾಗಿದ್ರೆ ಜೀವನ ಎಷ್ಟು ಸುಂದರ ಅನಿಸಿತು. ಸೀತತ್ತೆ ಒಳಗೆ ಹೋಗಿ ಬಿಸಿ ಬಿಸಿ ಬಜ್ಜಿ ತಯಾರಿಕೆಗೆ ತೊಡಗಿದರು. ದೇವರು ಸಂಪಾದನೆಗೆ ಒಬ್ಬೊಬ್ಬರಿಗೆ ಒಂದೊಂದು ಮಾರ್ಗ ಕೊಟ್ಟಿರ್ತಾನಂತೆ ಇವರಿಗೆ ಈ ಮಾರ್ಗ ಇಟ್ಟಿದಾನೋ ಏನೋ ಇನ್ಮೇಲೆ ದಿನಾ ಹೋಗಿ

ಆನ್ ಬೇಕು ಅಂದ್ಕೊಂಡ್ರು. ಇನ್ನೊಂದ್ಸಾರಿ ಚಿಲ್ಟಾರಿ ಬಂದಾಗ ದುಡ್ ಇಸ್ಕೊಂಡ್ ಬಾ ಆನ್ ಬೇಕು ಅಂತ ಅಂದ್ಕೊಂಡ್ರು, ಆದರೆ ಚಿಲ್ಟಾರಿ ಬರಲೇ ಇಲ್ಲ. ಬಹಳ ಹೊತ್ತಿನ ನಂತರ ಬಂದ ಚಿಲ್ಟಾರಿ ಇನ್ನೊಂದು ಇನ್ನೂರು ಇಟಕೊಂಡಿರ್ಬೇಕಂತೆ, ಕಾಲ್ಗೆಜ್ಜೆ, ಸೀರೆ, ಗಡಿಯಾರ ಎಲ್ಲಿ ಕ್ಯಾನ್ಸಲ್ಲಂತೆ. ಈಗ ಅವರ ಕೈನ ಗಡಿಯಾರನೂ ಇಲ್ವಂತೆ, ಕೈ ಉಂಗುರ ಕರಗ್ತಾ ಇದೆಯಂತೆ. ಮುಂದೆ ಕುತ್ತಿಗೆ ಚೈನಿಗೂ ಕೈ ಹಾಕಬೇಕಾಗಿ ಬರಬಹುದಂತೆ ಅಂತ ಒಂದೊಂದೇ ಸುದ್ದಿ ತಂದಾಗ ಸೀತತ್ತೆ ಕೆರಳಿ ಕೆಂಡವಾಗಿ ಸುಬ್ಬನ ಮನೆಯತ್ತ ನಡೆದು 'ರೀ' ಅಂದು ಗುಡುಗಿದಾಗ ಎಲ್ಲರೂ ಬೀರಾಸುರರಾಗಿದ್ದಿದ್ರಿಂದ ಅವರವರ ಹೆಂಡಂದಿರೇ ಕೂಗಿದಂತಾಗಿ ಬಾಗಿಲತ್ತ ನೋಡಿದಾಗ ಯಾರ ಹೆಂಡತಿ ಬಂದಿರೋದು ಅಂತ ಯಾರಿಗೂ ಗುರುತಾಗಲಿಲ್ಲ ಸ್ವತಃ ಸಿಂಗಾರಯ್ಯನಿಗೂ. ಎಲ್ಲರೂ ಪರಸ್ಪರ ಮುಖ ನೋಡ್ಕೊಂಡು ಯಾರು ಯಾರು ಅನ್ನುವಂತೆ ಸಂಜ್ಞೆ ಮಾಡಿಕೊಂಡರು. ಸೀತತ್ತೆ ಸಿಂಗಾರಯ್ಯನ ಬಳಿ ಹೋಗಿ ಅನಾಮತ್ತಾಗಿ ಅವನನ್ನೆತ್ತಿ ನಡೀರೀ ಮನೆಗೆ ಅಂದು ಅವನ ಬಾಯಿ ವಾಸನೆ ನೋಡಿ ''ಇದೇನ್ರೀ ಸುಡುಗಾಡು ಚರಂಡಿ ವಾಸ್ತೆ ಬರ್ತಿದೆ'' ಅಂದಳು... ''ಮೇಡಂ ನೀವು ಯಾರೋ ಕ್ವಾಲಿಟಿ ಕಂಟ್ರೋಲ್ ನವರಿರಬೇಕು... ನಮ್ಮನ್ನು ಒಂದ್ಸಾರಿ Inspection ಮಾಡಿಬಿಡಿ ಸೇಫಾಗಿ ಮನೆಗೆ ಹೋಗ್ತೀವಿ'' ಅಂದು ಶಾಮಣ್ಣಿ ಶಖತ್ತಾಗಿ ಉಗಿಸಿಕೊಂಡ. ಸಿಂಗಾರಯ್ಯ ಸೀತತ್ತೆ ಕಡೆ ನೋಡಿ ನೀನು ನನ್ನ ಹೆಂಡ್ತಿ ತಾನೇ ಅಂದು ಇನ್ನಷ್ಟು ಉಗಿಸಿಕೊಂಡ.

ಸಿಂಗಾರಯ್ಯನನ್ನು ಹೊರತುಪಡಿಸಿ ಎಲ್ಲರೂ ಅವರವರ ಗ್ಲಾಸಿನಲ್ಲಿದ್ದದ್ದನ್ನು ಬಾಯಿಗೆ ಸುರಿದುಕೊಂಡು ಚಪ್ಪರಿಸಿದರು. ಸಿಂಗಾರಯ್ಯ ಗ್ಲಾಸಿಗೆ ಕೈ ಹಾಕಿದಾಗ ಸೀತತ್ತೆ ಜೋರಾಗಿ ಕೆಮ್ಮಿದ್ದಕ್ಕೆ ಹೆದರಿಕೊಂಡ. ನಮ್ಮ ಯಜಮಾನರತ್ರ ಎಷ್ಟು ಕಸ್ಕೊಂಡಿದೀರ ಎಲ್ಲ ಮರ್ಯಾದೆಯಾಗಿ ಕಕ್ ಬಿಡಿ ಇಲ್ದಿದ್ರೆ ಅಂದು ಸೀತತ್ತೆ ಹೂಂಕರಿಸಿದಾಗ ಎಲ್ಲರೂ ಸಿಂಗಾರಯ್ಯನಿಂದ ಪಡೆದ ಹಣ ವಾಚು, ಉಂಗುರು ಎಲ್ಲ ಹಾಕಿಬಿಟ್ಟರು. ಅದನ್ನೆಲ್ಲ ತಗೊಂಡು ನಡಿರ್ರೀ ಅಂದಳು ಸೀತತ್ತೆ ಸಿಂಗಾರಯ್ಯ ಹಿಂಬಾಲಿಸಿದ ''ಹೆಂಗ್ ಹೋಗ್ತಾ ಇದಾನೆ ನೋಡು ಹೆಣ್ಣಿಗ್ ಸುಬ್ಬ'' ಅಂದು ಶಾಮಣ್ಣಿ ಗೊಣಗಿದ. ಇನ್ನೊಂದ್ಸಾರಿ ನನ್ನತ್ರ ಇಸ್ಕೋಟು ಅದೂ ಇದೂ ಅಂತ ನೂರು ರೂಪಾಯಿ ಕೇಳಿದ್ರೋ ಅಂತ ಸೀತತ್ತೆ ಅಂದಾಗ ಸಿಂಗಾರಯ್ಯ ''ಲೇ ಇನ್ಮೇಲೆ ನಿನ್ನನ್ನ ನಾನು ದುಡ್ಡು ಕೇಳೋದೇ ಇಲ್ಲ ಕಣೆ... ನನ್ನ ಪೆನ್ ಷನ್ ಹಣಾನ ನಿನ್ ಕೈಗೆ ಹಾಕೋ ಮೊದಲು ಎಷ್ಟು ಬೇಕೋ ಅಷ್ಟನ್ನ ಹಿಡ್ಕೊಂಡೇ ಕೊಟ್ ಬಿಡ್ತೀನಿ ಅಂದು ಸೀತತ್ತೆ ಕೆನ್ನೆ ಚಿವುಟಿ ಪರಾರಿಯಾದರು ಸೀತತ್ತೆಗೆ ಮೈ ಬಿಸಿಯಾಗಿ ಸಿಲ್ಲಿ ಫೆಲೋ ಅಂದರು.

ಇದಿಷ್ಟೂ ನಡೆದಿದ್ದಲ್ಲ, ಕಟ್ಟೆಮೇಲೆ ಟೈಂ ಪಾಸ್ ಅಂತ ಸೀತತ್ತೆ ನಳಿನಾಕ್ಷಿ, ಪದ್ಮಜ, ಸುಧಾಮಣಿ ಇವರೆಲ್ಲ ಹರಟೆ ಹೊಡೀತಾ ಕೂತಿದ್ದಾಗ ರೀ... ಮೊನ್ನೆ ನನಗೆ ಎಂಥಾ ಕನಸು ಬಿತ್ತು ಗೊತ್ತಾ ಅಂತ ಸೀತತ್ತೆ ತನ್ನ ಪರಿವಾರದವರಿಗೆ ಹೇಳಿದ ಒಂದು ಕನಸಿನ ಟೈಂ ಪಾಸ್ ಕಥೆ.

★★★

ಪ್ರಾರ್ಥಿಸುತ್ತಿರುವ ಕೈಗಳು

- ಶಿವು

''ಅಕ್ಕನ ಮಹಿಮೆ ಸಾಮಾನ್ಯ ಅಲ್ಲಾರೀ, ಹಣದ ಹೊಳೇನೇ ಹರಿದು ಬರುತ್ತೆ....'' ಅಂದರು ಗೆಳೆಯ ಮೂರ್ತಿಯವರು.

''ಏನೋ ಒಗಟು ಮಾತಾಡ್ತಾ ಇದೀರಲ್ಲಾ ಮೂರ್ತಿಯವರೇ, ಅಕ್ಕಮಹಾದೇವಿಯವರಂತಹ ದೇವಾಂಶ ಸಂಭೂತರಿಗೂ ಹಣದ ಹೊಳೆಗೂ ಎಲ್ಲಿಂದೆಲ್ಲಿಯ ಸಂಬಂಧ? ಸ್ವಲ್ಪ ಬಿಡಿಸಿ ಹೇಳಿ'' ಅಂತ ಕೇಳೇಬಿಟ್ಟೆ.

''ಅಕ್ಕ ಅಂದರೆ ಆ ಮಹಾನ್ ಶಿವಶರಣೆ ಅಲ್ಲಾರೀ, ಅಸೋಸಿಯೇಷನ್ ಆಫ್ ಕನ್ನಡ ಕೂಟಾಸ್ ಆಫ್ ಅಮೆರಿಕ ಅನ್ನೋ ಹೆಸರಿನ ಕಿರಿದಾದ ರೂಪ AKKA ಅಂತ. ಎರಡು ವರ್ಷದ ಹಿಂದೆ ಈ ಸಂಸ್ಥೆ ಒಂದು ವಿಶ್ವ ಕನ್ನಡ ಸಮ್ಮೇಳನ ಏರ್ಪಡಿಸಿತ್ತು. ಅಲ್ಲಿ ಈ ವಿಷಯ ಪ್ರಸ್ತಾಪಿಸಿದೆ ಅಷ್ಟೇ.''

''ವಿಶ್ವದ ಕನ್ನಡ ಸಮ್ಮೇಳನ ಅಂದ್ರೆ ಸಾವಿರಾರು ಜನಗಳಿಂದ ತಿರುಪೆ ಎತ್ತಿ ಯಲ್ಲಮ್ಮನ ಜಾತ್ರೆ ಮಾಡೋ ಬಾಬ್ತು ಅಲ್ವೇ, ಇದರಲ್ಲಿ ಹಣದ ಹೊಳೆ ಹರಿದು ಹೋಗತ್ತೆ ಅಂದ್ರೆ ಒಪ್ತೀನಿ. ಹರಿದು ಬರತ್ತೆ ಅಂತೀರಲ್ಲಾ ಅದು ಹ್ಯಾಗೆ ಸಾಧ್ಯ?''

''ಅದರಲ್ಲೇ ಇರೋದು ನೋಡಿ ಸ್ವಾರಸ್ಯ. ಇಷ್ಟು ಬೇಗ ಈ ಒಗಟಿಗೆ ಉತ್ತರ ಹೇಳಿಬಿಟ್ರೆ ಮಜಾ ಇರೋಲ್ಲಾ. ನಿಧಾನವಾಗಿ ಅದನ್ನ ವಿವರಿಸ್ತೇನೆ. ಈಗ ಇಲ್ಲೇನಾಗ್ತಾಯಿದೆ ಅಂತ ಸ್ವಲ್ಪ ಹೇಳಿ. ಅಪರಂಜಿ ಸರ್ಕ್ಯುಲೇಷನ್ ಹೇಗಿದೆ? ಈಚೆಗೆ ನೀವು ಯಾವ್ದಾದರೂ ಹೊಸ ಪುಸ್ತಕ ಬರ್ದಿದೀರಾ?'' ಅಂತ ಪ್ರಶ್ನಿಸಿದರು ಮೂರ್ತಿ.

ಮೂರ್ತಿಯವರನ್ನ ನಾನು ನೋಡಿ ಸುಮಾರು ಎರಡು ವರ್ಷ ಆಗಿತ್ತು. ವೃತ್ತಿಯಲ್ಲಿ ಇಲೆಕ್ಟ್ರಿಕಲ್ ಇಂಜಿನಿಯರ್ ಆಗಿರುವ ಮೂರ್ತಿ, ಅರುವತ್ತರ ದಶಕದಲ್ಲೇ ಯುರೋಪಿಗೆ ತೆರಳಿ ಅಲ್ಲಿಂದ ಕೆನಡಾಕ್ಕೆ ವಲಸೆ ಹೋಗಿ ಅಲ್ಲೇ ನೆಲೆಸಿರುವ ಆಸಾಮಿ. ಐ ಟ್ರಿಪಲ್ ಇ ಪದವೀಧರರಾದ ಇವರು ಕೆನಡಾ ಸರ್ಕಾರದ ಅನೇಕ ಉನ್ನತ ಹುದ್ದೆಗಳನ್ನ ನಿರ್ವಹಿಸಿ ಈಗ ನಿವೃತ್ತರಾಗಿದ್ದಾರೆ. ಕನ್ನಡ ಭಾಷೆಯ ಕಟ್ಟಾ ಅಭಿಮಾನಿ ಈತ. ಟೊರಾಂಟೋ ಕನ್ನಡ ಸಂಘದ ಅಧ್ಯಕ್ಷರೂ ಆಗಿದ್ದರಂತೆ. ಮೂರ್ತಿಯವರ ಶ್ರೀಮಂತ ಅನುಭವಗಳನ್ನ (ರಿಚ್ ಎಕ್ಸ್ಪೀರಿಯನ್ಸ್ ಅನ್ನೋಕ್ಕೆ ಬೇರೇ ಸೂಕ್ತ ಪದ ಇದ್ರೆ ಅದನ್ನೇ ಓದಿಕೊಂಡು ಬಿಡಿ) ಕೇಳೋ ತವಕ ನನಗೆ.

''ದೇವರ ದಯೆ ಮೂರ್ತಿ, ಅಪರಂಜಿ ಕಾಡಿಗೆ ಹೋಗೋ ಪ್ರಸಂಗ ಅಂತೂ ಬರೋ ಹಾಗೆ ಕಾಣಿಸ್ತಾ ಇಲ್ಲ. ಅವಳ ನಿರಾಡಂಬರ ಜೀವನಕ್ಕೆ ಬೇಕಾದಷ್ಟು ಉಪ್ಪನ್ನು ಅವಳ ಓದುಗರು ಸಂತೋಷವಾಗಿಯೇ ಒದಗಿಸ್ತಾ ಇದಾರೆ ಕಳೆದ ಇಪ್ಪತ್ತು ವರ್ಷಗಳಿಂದ. ಅದಿರಲಿ, ಈಗ ನಿಮ್ಮ ಅನುಭವಗಳನ್ನು ಕುರಿತು ಸ್ವಲ್ಪ ಹೇಳಿ'' ಅಂದೆ.

''ಏನು ತಿಳ್ಕೋಬೇಕು ನೀವು?''

''ನಾನು ಸೈಕಲ್ಲಿನ ವಿಕಾಸದ ಬಗ್ಗೆ ಸೈಕಲ್ ವಾಲಾ ಅನ್ನೋ ಪುಸ್ತಕ ಬರೆದ ದಿನಗಳಿಂದ ಒಂದು ಪ್ರಶ್ನೆ ನನ್ನನ್ನು ಕಾಡುತ್ತಾ ಇದೆ. ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಯೂರೋಪ್ ಅಮೆರಿಕಾಗಳಲ್ಲಿ ಬೈಸಿಕಲ್, ಉಗಿ ಇಂಜಿನ್, ವಿದ್ಯುದ್ದೀಪ, ಕಾರು ಇವುಗಳನ್ನೆಲ್ಲಾ ಆ ದೇಶಗಳ ತಜ್ಞರು ಉತ್ಸಾಹದಿಂದ ಕಂಡುಹಿಡಿಯುತ್ತಿದ್ದಾಗ ನಮ್ಮ ನಾಡಿನಲ್ಲಿ ಏನಾಗುತ್ತಿತ್ತು ಅನ್ನೋ ಪ್ರಶ್ನೆ ಅದು. ಕುದುರೆ ಸಾರೋಟುಗಳಲ್ಲಿ ಓಡಾಡುತ್ತಿದ್ದ ಶ್ರೀಮಂತರು, ಮಂಡಿ ವ್ಯಾಪಾರ ನಡೆಸಿದ್ದ ವರ್ತಕರು, ಹೊಲದ ಕೆಲಸ ನಡೆಸಿದ್ದ ರೈತರು, ಅಗ್ರಹಾರದ ಬ್ರಾಹ್ಮಣರು, ಇವರು ಯಾರಿಗೂ ಈ ಬಗೆಯ ತಾಂತ್ರಿಕ ಕುತೂಹಲ ಇರಲೇ ಇಲ್ಲವೇ. ಇದಕ್ಕೆಲ್ಲಾ ಈಸ್ಟ್ ಇಂಡಿಯಾ ಕಂಪನಿಯ ದಬ್ಬಾಳಿಕೆಯ ಆಡಳಿತವೇ ಕಾರಣ ಅನ್ನೋ ಮಾತು ಸ್ವಲ್ಪ ಹುರುಳಿಲ್ಲದ್ದು ಅನ್ನಿಸುತ್ತೆ ನನಗೆ. ಬಿಳಿಯ ಜನಾಂಗಕ್ಕೂ ನಮಗೂ ಇರಬಹುದಾದ ಮೂಲಭೂತ ವ್ಯತ್ಯಾಸ ಇದಕ್ಕೆ ಕಾರಣವಿರಬಹುದೇ?'' ಅಂತ ನಾನು ಕೇಳಿದೆ.

ಮೂರ್ತಿ ಒಂದು ಗುಟುಕು ಡ್ರಾಫ್ಟ್ ಬೀರು ಹೀರಿ ಗಂಟಲು ಸರಿ ಮಾಡಿಕೊಂಡರು. ''ಚಿಕನ್ ಟಿಕ್ಕಾ ನಿಜವಾಗಲೂ ಚೆನ್ನಾಗಿದೆ. ನೀವೂ ಒಂದು ಪೀಸ್ ತಗೊಳ್ಳಿ'' ಅಂತ ನನಗೆ ತಾಕೀತು ಮಾಡಿದರು. ಆಮೇಲೆ,

''ಇದೆ, ಖಂಡಿತ ಮೂಲಭೂತವಾಗಿ ಅವರುಗಳು ನಮ್ಮಿಂದ ಬೇರೆಯೇ ಅನ್ನಿಸುತ್ತೆ ನನಗೆ. ಮೊದಲು ನಾನು ದೇಶಬಿಟ್ಟು ಹೊರಟಾಗ ಜರ್ಮನಿಯಲ್ಲಿ ಹಲವು ವರ್ಷಗಳು ಇರಬೇಕಾಯಿತು. ಆಗ ಒಮ್ಮೆ ನ್ಯೂರೆಂಬರ್ಗ್‌ಗೆ ಹೋಗೋ ಪ್ರಸಂಗ ಬಂತು. ನಿಮಗೆ ತಿಳಿದಿರುವಂತೆ ನೂರೆಂಬರ್ಗ್ ಪಟ್ಟಣ ಖ್ಯಾತ ಜಲವರ್ಣ ಚಿತ್ರಕಾರ ಡ್ಯೂರರ್ ಹುಟ್ಟಿದ ಊರು. ಅವನು ಹುಟ್ಟಿದ ಮನೆಯನ್ನು ಒಂದು ಪ್ರವಾಸಿಗರ ಪ್ರೇಕ್ಷಣೀಯ ಸ್ಥಳವಾಗಿ ರಕ್ಷಿಸಿಕೊಂಡಿದ್ದಾರೆ ಆ ಪಟ್ಟಣಿಗರು. ಪ್ರವಾಸಿಗನಾಗಿ ನಾನೂ ಆ ಮನೆಯನ್ನು ನೋಡಲು ಹೋದೆ. ಅಲ್ಲಿದ್ದ ಚಿತ್ರಗಳಲ್ಲಿ ನನ್ನ ಮನ ಸೆಳೆದ ಖ್ಯಾತ ಚಿತ್ರವೆಂದರೆ ಬೇಟೆಂಡೆ ಹೇಂಡೇ ಅನ್ನೋ ಚಿತ್ರ. ಬೇಟೆ ಎಂದರೆ ಜರ್ಮನ್ ಭಾಷೆಯಲ್ಲಿ ಪ್ರಾರ್ಥನೆ ಅಂತ. ಬೇಟೆಂಡೆ ಅಂದರೆ ಪ್ರಾರ್ಥಿಸುತ್ತಿರುವ ಅಂತಾಗುತ್ತೆ. ಹೇಂಡೆ ಅನ್ನೋದು ಹಂಡ್ ಪದದ ಬಹುವಚನ ರೂಪ. ಕೈಗಳು ಅಂತ ಅದರರ್ಥ. ಒಬ್ಬ ವಯಸ್ಸಾದ ಮುದುಕ ದೇವರಿಗೆ ತನ್ನ ಕೈ ಜೋಡಿಸಿರುವ ಚಿತ್ರ ಅದು. ಚಿತ್ರದಲ್ಲಿ ಕಾಣುತ್ತಿರುವ ಅವರ ಕೈಗಳು ಹಾಗೂ ಅಂಗಿಯ ತೋಳಿನ ತುದಿಗಳು ಮಾತ್ರ. ಎಡ ಮುಂಗೈ ಮಾತ್ರ ಪ್ರೇಕ್ಷಕರಿಗೆ ಕಾಣುವಂತೆ ಮೂಡಿಸಿರುವ ಆ ಚಿತ್ರದಲ್ಲಿ ಆ ಮುಂಗೈ ಹಿಂಭಾಗದ ಎಲ್ಲ ನರಗಳು, ಬಾಡಿರುವ ಸ್ನಾಯುಗಳು ಎಲ್ಲವನ್ನೂ ನೋಡುತ್ತಿದ್ದರೆ ಜೀವಂತ ಕೈಯ್ಯನ್ನು ನೋಡಿದಂತೆ ಭಾಸವಾಗಿ ಮನಸ್ಸು ಭಾವಪರವಶವಾಗುತ್ತೆ. ಆ ಚಿತ್ರವನ್ನು ನೋಡಿದ ನಂತರ ಪಕ್ಕದ ಕೋಣೆಗೆ ಹೋದೆ. ಅಲ್ಲಿ ಡ್ಯೂರರ್ ರಚಿಸಿದ ಈ ಚಿತ್ರದ ಇಪ್ಪತ್ತು ಕರಡು ರೂಪಗಳನ್ನು ಇಟ್ಟಿದ್ದರು. ಒಂದಕ್ಕಿಂತ ಒಂದು ಕಲಾತ್ಮಕವಾಗಿದ್ದರೂ, ಅವು ಯಾವುವೂ ಡ್ಯೂರರ್‌ಗೆ ಸಮಾಧಾನ ತರಲಿಲ್ಲವಂತೆ. ಕೊನೆಗೆ ತನ್ನ ಪರಿಕಲ್ಪನೆ ಕುಂಚದಿಂದ ಪರಿಪೂರ್ಣವಾಗಿ ಮೂಡಿಬಂದಾಗ ಅವ ಭಾವಪರವಶವಾದನಂತೆ. ಕಲಾಕೃತಿಯಾಗಲೀ, ಉಗಿ ಇಂಜಿನ್ನಿನ ನಕ್ಷೆಯಾಗಲೀ ಪರಿಪೂರ್ಣತೆ ಆ ಜನಗಳ ಮೂಲಭೂತ ಪ್ಯಾಶನ್ ಅನ್ನಿಸುತ್ತೆ. ನಾವುಗಳು ಇಲ್ಲಿ ಮನೆಗೆ ಬಂದ ಅತಿಥಿಗಳಿಗೆ ಅಪಚಾರ ಆಗದೇ ಇರೋಹಾಗೆ ಎಚ್ಚರ

ವಹಿಸೋದಿಲ್ವೇ ಅಷ್ಟೇ ಎಚ್ಚರದಿಂದ ಆ ಜನ ಸತ್ಯಕ್ಕೆ ಅಪಚಾರ ಆಗದ ಹಾಗೆ ನೋಡ್ಕೋತಾರೆ ಅನ್ನಬಹುದು.''

''ಉಣ್ಣಕ್ಕೆ ಉಡುಕ್ಕೆ ಸಾಕಷ್ಟು ಇರೋ ದೇಶಗಳಲ್ಲಿ ಸತ್ಯಾನ ಕಾಪಾಡಿಕೊಳ್ಳೋದಕ್ಕೆ ವ್ಯವಧಾನ ಇರಬಹುದು. ಆದರೆ ನಮ್ಮಂಥ ಬಡದೇಶಗಳಲ್ಲಿ....''

''ಯಾವಾಗಲೂ ಆ ದೇಶಗಳು ಸಮೃದ್ಧವಾಗೇ ಇದ್ವು ಅಂತ ತಿಳೀಬೇಡಿ. ವಿಕ್ಟೋರಿಯನ್ ಇಂಗ್ಲೆಂಡಿನಲ್ಲಿ ಸಾಕಷ್ಟು ಬಡತನ ಇತ್ತು. Throwing the baby with the bath water ಅನ್ನೋ ಎಕ್ಸ್‌ಪ್ರೆಶನ್ ಕೇಳಿದ್ದೀರಾ?''

''ಕೇಳಿದ್ದೇನೆ. ಆದರೆ ಅದರ ವ್ಯುತ್ಪತ್ತಿ ತಿಳೀದು''

''ಹೇಳ್ತೀನಿ ಕೇಳಿ. ಡಿಕನ್ಸ್‌ನ ಇಂಗ್ಲೆಂಡಿನಲ್ಲಿ ಮಧ್ಯಮ ವರ್ಗದವರಿಗೂ ನೀರಿಗೆ ಬರ ಇತ್ತು. ಸ್ನಾನ ಮಾಡುಕ್ಕೆ ಅಂತ ಒಮ್ಮೆ ಬಾತ್ ಟಬ್ ತುಂಬಿಸಿದರೆ ಮನೆ ಮಂದಿಗೆಲ್ಲಾ ಆ ಕೊಳೆ ನೀರಿನಲ್ಲೇ ಸ್ನಾನ. ಎಲ್ಲರ ಸ್ನಾನಗಳೂ ಮುಗಿದ ನಂತರ ಮನೆ ಮಗುವಿನ ಸರದಿ. ಆಗಿನ ಕಾಲದ ಸ್ನಾನದ ಮನೆಗಳೋ ಕತ್ತಲು ಗವಿಗಳು. ಕ್ಯಾಂಡಲಿನ ಮಬ್ಬುಗತ್ತಲಲ್ಲಿ ಸ್ನಾನಮಾಡಿ ಉಳಿದ ನೀರನ್ನು ಮಹಡಿಯ ಮೇಲಿನಿಂದಲೇ ರಸ್ತೆಯ ಮೋರಿಗೆ ಸುರಿಯುವ ಪರಿಪಾಠವಿತ್ತು ಆಗ. ಹಾಗೆ ನೀರನ್ನು ಸುರಿಯುವಾಗ ಅದರಲ್ಲಿ ಮಗು ಇರದಂತೆ ಎಚ್ಚರ ವಹಿಸುವ ಕುರಿತು ಆ ಗಾದೆ ಮಾತು ಬಂತು.

''ಮೌಲ್ಯಪಾಲನೆಗೆ ಬಡತನ ಎಂದಿಗೂ ಅಡ್ಡ ಬರೋದಿಲ್ಲ''

''ಬಿಳಿಯರ ಇನ್ನು ಯಾವ ಗುಣ ನಿಮ್ಮ ಮೇಲೆ ಪರಿಣಾಮ ಬೀರಿದೆ ಅಂತೀರಾ?''

''ಇನ್ನೊಂದು ಮುಖ್ಯ ಗುಣಾನ ಹೀಗೆ ಉದಹರಿಸ್ಬೋದು. ನಮ್ಮಲ್ಲಿ ಒಂದು ಗಾದೆ ಇಲ್ವೇ, ಪುರಾಣ ಹೇಳೋಕ್ಕೆ ಬದನೇಕಾಯಿ ತಿನ್ನೋಕ್ಕೆ ಅಂತ.''

ಅಲ್ಲಿ ಒಬ್ಬ ವ್ಯಕ್ತಿ ಹೇಳೂದಕ್ಕೂ ಅವನು ಮಾಡೋದಕ್ಕೂ ಅತಿ ಕಡಿಮೆ ವ್ಯತ್ಯಾಸ ಇರುತ್ತೆ ಅನ್ನಿಸುತ್ತೆ ಇಲ್ಲಿಗೆ ಹೋಲಿಸಿದರೆ. ಒಂದು ವೇಳೆ ಯಾವೋನಾದರೂ ಹೆಚ್ಚು ವ್ಯತ್ಯಾಸ ತೋರಿಸಿದರೆ ಸಮಾಜ ಅವನಿಗೆ ತಕ್ಷಣವೇ ಛೀಮಾರಿ ಹಾಕೋದನ್ನ ನಾನೇ ನೋಡಿದೇನೆ.

''ಅವರ ಅವಗುಣಗಳ ಬಗ್ಗೆ ಏನು ಹೇಳ್ತೀರಾ?''

''ಅವರುಗಳ ಇನ್ನೊಂದು ವರ್ತನೆನ ಪೂರ್ತಿ ಅವಗುಣ ಅಂತ ವರ್ಗೀಕರಿಸುಕ್ಕೆ ಆಗುತ್ತೊ ಇಲ್ವೋ ತಿಳೀದು. ಆ ಜನ ಬೇಗ ಸ್ನೇಹಿತರಾಗೋದಿಲ್ಲ. ತಮ್ಮ ಪ್ರೈವೆಸಿನ ಬಹಳ ಜಾಗರೂಕತೆಯಿಂದ ಕಾಪಾಡ್ಕೊತಾರೆ ಅವರು. ನಾನೇ ನೋಡಿರೋಹಾಗೆ ನಮ್ಮ ಊರಿನಲ್ಲಿ ಇಬ್ಬರು ಅಪರಿಚಿತರು ಬಸ್ ಸ್ಟಾಂಡಿನಲ್ಲೋ ಎಲ್ಲೋ ಒಂದು ಕಡೆ ಮಾತುಕತೆ ಪ್ರಾರಂಭಿಸಿದರೆ ಸಾಕು, ಮೊದಲನೇ ಘಂಟೆಯಲ್ಲೇ ಅವರ ಮಕ್ಕಳು ಅಳಿಯ ಸೊಸೆ ಇವರುಗಳ ಪೂರ್ತಿ ಚರಿತ್ರೆಗಳ ವಿನಿಮಯ ಆಗಿಹೋಗಿರತ್ತೆ, ಅವರಿಬ್ಬರ ನಡುವೆ. ಅವರು ಎಷ್ಟು ಗಾಢವಾಗಿ ಸ್ನೇಹ ಬೆಳೆಸ್ತಾರೆ ಅಂದ್ರೆ, ಬಸ್ಸಿನಿಂದ ಇಳಿಯೋ ಹೊತ್ಗೆ ಯಾವ್ದೋ ಜಗಳ ಆಡಿ ಅವರಿಬ್ರೂ ಮುಖ ತಿರುಗಿಸ್ಕೊಂಡು ಬೇರೆ ಬೇರೆ ದಿಕ್ಕುಗಳಲ್ಲಿ ಹೋದ್ರೂ ಆಶ್ಚರ್ಯ ಇರೋದಿಲ್ಲ. ಪಶ್ಚಿಮ ದೇಶಗಳಲ್ಲಿ ಇಂತಹ ಸಂಗತಿ ಬಹಳ ಅಪರೂಪ.''

ಕೆನಡಾದಲ್ಲಿನ ಹವಾಗುಣ ವೈಪರೀತ್ಯದಲ್ಲಿಯೂ ಸಹಾ ಅಲ್ಲಿನ ಜನ ಕಷ್ಟ ಸಹಿಷ್ಣುಗಳಾಗಿ ಕೆಲಸ ಮಾಡೋದನ್ನ ಮೂರ್ತಿ ವಿವರವಾಗಿ ತಿಳಿಸಿದರು. ಅಲ್ಲಿನ ನಾರ್ತ್ ವೆಸ್ಟ್ ಟೆರಿಟರಿ ಎಂಬ ಪ್ರಾಂತ್ಯದಲ್ಲಿನ ಪಟ್ಟಣ ಎಲ್ಲೋನೈಫ್ ನಲ್ಲಿ ಈಚೆಗೆ ವಜ್ರದ ನಿಕ್ಷೇಪಗಳನ್ನ ಕಂಡುಹಿಡಿದಿದ್ದಾರಂತೆ... ಆ ಊರು ಅರುವತ್ತನೆಯ ಅಕ್ಷಾಂಶದ ಮೇಲಿನ ಪ್ರದೇಶ. ತಾಪಮಾನ ಶೂನ್ಯಕ್ಕೆ ಮೂವತ್ತು ಡಿಗ್ರಿಗಳಷ್ಟು ಕಡಿಮೆ. ವರ್ಷಕ್ಕೆ ಆರು ತಿಂಗಳು ಸಂಪೂರ್ಣ ಕತ್ತಲೆ. ಈ ಎಲ್ಲ ಅನಾನುಕೂಲಗಳಿದ್ದರೂ ಅಲ್ಲಿನ ಕೆಲಸಗಾರರು ಆ ವಜ್ರದ ಗಣಿಗಳಲ್ಲಿ ಕೆಲಸ ಮಾಡಲು ಒಂದು ಸ್ವಲ್ಪವೂ ಹಿಂದೆಗೆದಿಲ್ಲ. ''ನನಗೆ ಎಲ್ಲೋನೈಫ್ ನಲ್ಲಿ ಕೆಲಸ ಆಫರ್ ಮಾಡಿದರು. ವಾತಾವರಣಕ್ಕೆ ಹೆದರಿ ನಾನು ಹಿಂಜರಿದೆ. ಕೆಲಸ ಒಪ್ಪಿಕೊಂಡ ನನ್ನ ಕೆನೇಡಿಯನ್ ಗೆಳೆಯ ಎರಡೇ ವರ್ಷಗಳಲ್ಲಿ ನನಗಿಂತ ಮೂರುಪಟ್ಟು ಶ್ರೀಮಂತನಾದ'' ಅಂದರು ಮೂರ್ತಿ.

ಮಾತುಕತೆಗಳ ನಡುವೆ ಕಾಲ ಸರಿದದ್ದೇ ತಿಳಿಯಲಿಲ್ಲ. ಒಮ್ಮೆಲೇ ನನಗೆ ಮೂರ್ತಿ ಪ್ರಸ್ತಾಪಿಸಿದ ''ಅಕ್ಕ'' ನೆನಪಾಯಿತು.

''ಅಕ್ಕ, ಹಣದ ಹೊಳೆ ಹರಿಸಿದ ಕತೆ....'' ನಾನು ನೆನಪಿಸಿದೆ.

''ಪ್ಲ, ಅದೊಂದು ಸಾರ್ಡಿಡ್ ಸ್ಟೋರೀರಿ. ಯಾರಿಗೂ ಹೇಳಬೇಡಿ. (ನೋಡಿ, ಎಷ್ಟು ಚೆನ್ನಾಗಿ ನಾನು ನನ್ನ ವಚನ ಕಾಪಾಡಿಕೊಂಡು ಬಂದಿದೇನೆ) ಅಕ್ಕದವರು ವಿಶ್ವ ಕನ್ನಡ ಸಮ್ಮೇಳನ ನಡೆಸ್ತೇವೆ ಅಂತ ಸಂಭ್ರಮ ಪಟ್ಟು, ಇಲ್ಲಿನ ಹಲವು ಅಧಿಕಾರಿಗಳಿಗೆ ತಮ್ಮ ಆಹ್ವಾನ ಪತ್ರಿಕೆ ಕಳಿಸಿದ್ರು. ಇಲ್ಲಿನ ಒಬ್ಬ ಚಾಣಾಕ್ಷ ಅಧಿಕಾರಿ, ಆ ಆಹ್ವಾನ ಪತ್ರಿಕೆನೇ ಆಧಾರವಾಗಿ ಇಟ್ಟುಕೊಂಡು ಕನ್ನಡ ಸಮ್ಮೇಳನಕ್ಕೆ ಹೋಗೋ ಪ್ರಾಸ್ಪೆಕ್ಟಿವ್ ಡೆಲಿಗೇಟುಗಳಿಗೆ ಪರಿಚಯ ಪತ್ರಗಳನ್ನ ಕೊಡುಗೆ ಪ್ರಾರಂಭಿಸಿದ. ಅಮೆರಿಕನ್ ಕಾನ್ಸುಲೇಟಿನವರಿಗೆ ಕೊಡುಕ್ಕೆ ಅಂತ.''

''ಎಷ್ಟು ಹೆಲ್ಪ್‌ಫುಲ್ ಕೆಲಸ ಅಲ್ವೇ''

''ಖಂಡಿತ. ಆದರೆ ಎಲ್ಲರಿಗಿಂತ ಹೆಚ್ಚು ಸಹಾಯವಾದದ್ದು ಆತನಿಗೇ. ಪರಿಚಯ ಪತ್ರಗಳ ಮಾರಾಟ ಪ್ರಾರಂಭಿಸಿಕೊಂಡು ಹಣದ ಹೊಳೇನೇ ಹರಿಸ್ಕೊಂಡು ಬಿಟ್ಟ ನೋಡಿ ಆತ.''

''ಕಾನ್ಸುಲೇಟಿನವರು ಸುಮ್ಮನಿದ್ದರೆ?''

''ಅವರಿಗೆ ಗೊತ್ತಾದ ತಕ್ಷಣ ಅವರು ವೀಸ ಕೊಡೋದನ್ನ ನಿಲ್ಲಿಸಿಬಿಟ್ಟರು. ಆದರೆ ಅಷ್ಟು ಹೊತ್ತಿಗಾಗಲೇ ಬೇಕಾದಷ್ಟು ನೀರು ಹರಿದುಬಿಟ್ಟಿತ್ತು ಹೊಳೇಲಿ., ಹೋಗ್ಲೀ ಬಿಡಿ ಮಾಡಿದೋರ ಪಾಪ ಆಡಿದೋರ ಬಾಯಲ್ಲಿ ಅಂತ, ನಮಗ್ಯಾಕೆ ಆ ಮಾತು. ಕನ್ನಡಿಗನಿಗೆ ಸಂದ ಸೇವೆ, ಕನ್ನಡ ತಾಯಿಯ ಸೇವೆ ಅಂತ ಸುಮ್ಮನಾದೆ:''

ಆಳ್ ಕನ್‌ನಡದ ತಾಯ್, ಏಳ್ ಕನ್‌ನಡದ ತಾಯ್ ಎಂದು ಬಿ.ಎಂ.ಶ್ರೀ ಭಾಷೆಯಲ್ಲಿ ಹಾಡುತ್ತಾ ಮೂರ್ತಿಯವರನ್ನು ಮನೆಗೆ ತಲುಪಿಸಿ, ಲೇಟಾಗಿದ್ದಕ್ಕೆ ಬಯ್ಯಿಸಿಕೊಳ್ಳಲು ಮೈಯ್ಯನ್ನು ಜಡ್ಡುಮಾಡಿಕೊಂಡು ಗೃಹಾಭಿಮುಖವಾಗಿ ನಡೆದೆ.

★★★

ಪಿ.ಜಿ. ವುಡ್‌ಹೌಸ್

– ಶಿವು



ಕನ್ನಡದ ಓದುಗರಿಗೆ ವುಡ್‌ಹೌಸ್‌ನ ಹಾಸ್ಯದ ರಸದೌತಣದ ರುಚಿಯನ್ನು ಪರಿಚಯಿಸಿದ ಕೀರ್ತಿ 'ಕೇಫ' ಅವರಿಗೆ ಸಲ್ಲಬೇಕು. 'ಕೇಫ' ಸೃಷ್ಟಿಸಿದ ಶೌರಿ, ಪಾಂಡು ಪಾತ್ರಗಳು ವುಡ್‌ಹೌಸ್‌ನ ಖ್ಯಾತ ಪಾತ್ರಗಳಾದ ಜೀವ್ಸ್ ಹಾಗೂ ಬೆರ್ಟಿವೂಸ್ಟರ್‌ಗಳ ಪ್ರತಿರೂಪಗಳು. ಬೆರ್ಟಿಗೆ ಫ್ರೆಂಡ್ ಫಿಲಾಸಫರ್ ಹಾಗೂ ಗೈಡ್ ಆಗಿದ್ದ ಜೀವ್ಸ್, ಕಾನನ್‌ಡಾಯ್ಲ್ ಸೃಷ್ಟಿಸಿದ ಷೆರ್ಲಾಕ್ ಹೋಮ್ಸ್‌ನಂತೆಯೇ ಜಗದ್ವಿಖ್ಯಾತ ಪಾತ್ರಗಳಲ್ಲಿ ಒಬ್ಬ. ವುಡ್‌ಹೌಸ್‌ನ ವಿಪುಲವಾದ ಹಾಸ್ಯ ಸಾಹಿತ್ಯದಲ್ಲಿ, ಜೀವ್ಸ್‌ನಂತೆಯೇ ಇನ್ನೂ ಅನೇಕ ಪಾತ್ರಗಳು ಜನಮನದಲ್ಲಿ ನೆಲೆಸಿವೆ.

ವುಡ್‌ಹೌಸ್ ಹುಟ್ಟಿದ್ದು ಇಂಗ್ಲೆಂಡಿನಲ್ಲಿ 1881ರ ಅಕ್ಟೋಬರ್ ಹದಿನೈದರಂದು. ಡಲ್‌ವಿಚ್ ಕಾಲೇಜಿನಲ್ಲಿ ವ್ಯಾಸಂಗ. ಚಿಕ್ಕ ವಯಸ್ಸಿನಿಂದಲೇ ಹಾಸ್ಯ ಬರವಣಿಗೆಯತ್ತ ಒಲವು. ಇವನ ಮೊದಲ ಹಲವು ಲೇಖನಗಳು ''ಗ್ಲೋಬ್'' ಮತ್ತು ''ದ ಕ್ಯಾಪ್ಟನ್'' ಪತ್ರಿಕೆಗಳಲ್ಲಿ ಪ್ರಕಟವಾದವು. ಅನಂತರ ಹಾಸ್ಯ ಕಾದಂಬರಿಗಳ ಸರಣಿ. ಬೆರ್ಟಿ ವೂಸ್ಟರ್ ಅಲ್ಲದೆ ಮುಲ್ಲಿನೀರ್, ಲಾರ್ಡ್ ಎಮ್ಸ್‌ವರ್ತ್, ಆಂಟ್ ಅಗಾಥಾ, ಅಂಕಲ್‌ಫ್ರೆಡ್ ಇವೇ ಮುಂತಾಗಿ, ಆಗಿನ ಇಂಗ್ಲಿಷ್ ಸಮಾಜದಲ್ಲಿ ಕಾಣಸಿಗುತ್ತಿದ್ದ ಅನೇಕ ಪಾತ್ರಗಳ ವಿಕಟ ಪ್ರತಿರೂಪಗಳನ್ನು ವುಡ್‌ಹೌಸ್ ತನ್ನ ಕಾದಂಬರಿಗಳಲ್ಲಿ ಅಳವಡಿಸಿದ. ವುಡ್‌ಹೌಸ್‌ನ ಹಾಸ್ಯ ಮುಖ್ಯವಾಗಿ ಭಾಷೆಯನ್ನು ಅವಲಂಬಿಸಿದ್ದು. ಸ್ಪ್ರಿಂಗ್ ಫೀವರ್ ಎಂಬ ಕಾದಂಬರಿಯ ಮೊದಲ ಸಾಲುಗಳನ್ನು ನೋಡಿ.

''ನ್ಯೂಯಾರ್ಕಿಗೆ ವಸಂತ ಮಾಸ ಆಗಮಿಸಿತ್ತು. ಎಂಟೂ ಕಾಲಿಗೆ ಬರಬೇಕಾದ ಗ್ರೇಟ್‌ನೆಕ್ ರೈಲು ಪೆನಿಸಿಲ್ವೇನಿಯಾ ನಿಲ್ದಾಣಕ್ಕೆ ಆಗಮಿಸಿತ್ತು. ಲೇವಾದೇವಿಗಾರ ಜಿ. ಎಲ್ಲರಿ ಕೊಬಾಲ್ಡ್, ಇನ್ನೊಂದು ಪೈಂಟ್ ಬಡವರ ರಕ್ತ ಹೀರಲು ತನ್ನ ಆಫೀಸಿಗೆ ಆಗಮಿಸಿದ್ದ. ಇದೊಂದು ಆಗಮನಗಳ ದಿನ.'' ಹೀಗೆ ಪ್ರಾರಂಭಿಸಿ, ಓದುಗರ ಆಸಕ್ತಿಯನ್ನು ಸೆರೆಹಿಡಿಯುವುದು ವುಡ್‌ಹೌಸ್‌ನ ಕಾದಂಬರಿಗಳ ಲಕ್ಷಣ. ''ಎ ಡ್ಯಾಮ್ಸೆಲ್ ಇನ್ ಡಿಸ್ಟ್ರೆಸ್'' ಕಾದಂಬರಿಯೂ ಸಹಾ ಈ ನಿಯಮಕ್ಕೆ ಹೊರತಲ್ಲ. ಇಲ್ಲಿ ನೋಡಿ.



"ಹ್ಯಾಂಪ್‌ಷೈರ್ ಕೌಂಟಿಯಲ್ಲಿನ ಚರಿತ್ರಾರ್ಹವಾದ ಬೆಲ್‌ಫರ್ ಅರಮನೆ ಆ ಕಾದಂಬರಿಯ ರಂಗಭೂಮಿ. ಹಾಗಾಗಿ ಈ ಅರಮನೆಯ ಸುಂದರ ಪರಿಸರ, ಅನೇಕ ತಲೆಮಾರುಗಳಿಂದ ಇಲ್ಲಿ ವಾಸಿಸುತ್ತಿರುವ ಮಾರ್ಷ್‌ಮಾರ್ಟನ್ ಅರಸರ ಭವ್ಯ ಚರಿತ್ರೆ ಇವುಗಳ ಬಗ್ಗೆ ಸವಿಸ್ತಾರವಾಗಿ ಹೇಳುವುದು ಅತ್ಯಗತ್ಯ. ಆದರೆ ಈಗಿನ ಬಿರುಸಿನ ಓಡಾಟದ ದಿನಗಳಲ್ಲಿ ಕಾದಂಬರಿಕಾರನಿಗೆ ಒಂದು ದೊಡ್ಡ ಅನಾನುಕೂಲವಿದೆ. ಓಡುತ್ತಿರುವ ಬಸ್ಸಿನ ಪಕ್ಕದಲ್ಲಿ ಚಿಗರೆಯಂತೆ ಓಡಿ ಬಸ್ಸನ್ನು ಎಗರಿ ಹತ್ತುವ ಪ್ರಯಾಣಿಕನಂತೆ ಆಧುನಿಕ ಕಾದಂಬರಿಕಾರನೂ ಸಹಾ ಕಾದಂಬರಿಯ ಶುರುವಿನಲ್ಲೇ ಮುಖ್ಯ ವಿಷಯಕ್ಕೆ ಬರಬೇಕಾಗುತ್ತದೆ. ಮಿಂಚಿನ ವೇಗದಲ್ಲಿ ಆತ ಕಥೆಯನ್ನು ಪ್ರಾರಂಭಿಸದಿದ್ದರೆ, ಓದುಗರು ಪುಸ್ತಕವನ್ನು ಬದಿಗೆಸೆದು, ಸಿನಿಮಾ ನೋಡಲು ಹೊರಡುವುದು ಖಂಡಿತ."

ಹೀಗೆ ಪ್ರಾರಂಭವಾದ ಕಾದಂಬರಿ ಕೊನೆಯ ವರೆಗೂ ಹಾಸ್ಯ ಪ್ರಸಂಗಗಳಿಂದ ಓದುಗರನ್ನು ರಂಜಿಸುತ್ತದೆ. ಒಂದು ಕಡೆ ಒಬ್ಬ ಶ್ರೀಮಂತ ತರುಣ (ಲಾರ್ಡ್ ಬೆಲ್ಫರ್) ಯಾವುದೋ ರಸ್ತೆ ಜಗಳದಲ್ಲಿ ಸಿಕ್ಕಿಕೊಳ್ಳುತ್ತಾನೆ. ಜಗಳ ಬಿಡಿಸಲು ಪೋಲೀಸ್ ಪ್ಯಾದೆಯೊಬ್ಬ ಇವನ ಬಳಿ ಬಂದಾಗ, ಜಗಳದ ಅಮಲಿನಲ್ಲಿ ಬೆಲ್ಫರ್, ಪೋಲೀಸ್ ಪ್ಯಾದೆಯ ಹೊಟ್ಟೆಗೆ ಗುರಿಯಿಟ್ಟು ಗುದ್ದುತ್ತಾನೆ. ಪ್ಯಾದೆ ಕೋಪಗೊಂಡು, ಅವನನ್ನು ಠಾಣೆಗೆ ಎಳೆದೊಯ್ದು ಕೋರ್ಟಿನಲ್ಲಿ ಜುಲ್ಮಾನೆ ವಿಧಿಸುವಂತೆ ಮಾಡುತ್ತಾನೆ. ಈ ಎಲ್ಲ ಆಗುಹೋಗುಗಳನ್ನು ಒಬ್ಬ ಬಾತ್ಮೀದಾರ ಕಾವ್ಯಮಯವಾದ ವರ್ಣಿಸುವ ವೈಖರಿಯನ್ನು ವುಡ್‌ಹೌಸ್‌ನ ಮೂಲ ಇಂಗ್ಲಿಷ್‌ನಲ್ಲಿಯೇ ಸವಿಯಬೇಕು.


The Peer & the Policeman

Ourside the "Carlton' "tis averred, these stirring things occured. The hour' tis said (and no one doubts), was half past two or there abouts. The day was fair, the sky was blue, and everything was peaceful too. When suddenly a well dressed gent engaged in heated argument and roundly to abuse began another well dressed gentleman. His suede gloved fist he raised on high to dot the other in the eye. Who knows what horrors might have been, had there not come upon the scene, Old London city's favourite son, policeman C 231. "What means this conduct? prithee stop" exclaimed the admirable slop. With which he placed a warning hand upon the brawler's collar band. We simply hate to tell the rest. No subject here for flippant jest. The mere remembrace of the tale, has made our ink turn deadly pale. Let us be brief. Some demon sent stark madness on the well dressed gent. He gave the constable a punch, just where



the later kept his lunch. The constable said "well, well, well,' and marched him to a dungeon cell. At Vine Street Station out it came Lord Belfer was the culprit's name. But British justice is severe alike, on pauper and on peer. With even hand she holds the scale; a thumping fine in lieu of gaol, induced Lord B. to feel remorse and learn he mustn't punch the force."

ವುಡ್‌ಹೌಸ್‌ನ ಹಾಸ್ಯಪ್ರಜ್ಞೆಯ ಇನ್ನೊಂದು ಮುಖವನ್ನು ಅವನ ''ವೆರಿಗುಡ್ ಜೀವ್ಸ್'' ಕಾದಂಬರಿಯ ಮುನ್ನುಡಿಯಲ್ಲಿ ಕಾಣಬಹುದು. ಈ ಮುನ್ನುಡಿಯಲ್ಲಿ ವುಡ್‌ಹೌಸ್ ಓದುಗರಿಗೆ ತನ್ನ ಹಿಂದಿನ ಎರಡೂ ಕಾದಂಬರಿಗಳನ್ನು ಕೊಳ್ಳಿರೆಂದು ತಾರೀಫು ಮಾಡುತ್ತಾನೆ. ಕಾದಂಬರಿ ಕೊಳ್ಳುವುದು ತೀರ ಸುಲಭದ ಕೆಲಸ ಎಂದು ಹೇಳಿ, ಅದಕ್ಕೆ ಉದಾಹರಣೆಗಳನ್ನು ನೀಡುತ್ತಾನೆ ವುಡ್‌ಹೌಸ್. ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಗಳಲ್ಲಿರುವ ಈ ಭಾಗವನ್ನು ನಾನು ಕನ್ನಡ ಮತ್ತು ತಮಿಳಿಗೆ ಛಾಯಾನುವಾದ ಮಾಡಿದ್ದೇನೆ.



ಮುನ್ನುಡಿಯಲ್ಲಿ ಓದುಗನನ್ನು ಉದ್ದೇಶಿಸಿ, ವುಡ್‌ಹೌಸ್ ಹೀಗೆನ್ನುತ್ತಾನೆ.

''ನೀವು ಈ ಪುಸ್ತಕವನ್ನು ಸಂಪೂರ್ಣವಾಗಿ ಆನಂದಿಸಬೇಕಾದರೆ, ನನ್ನ ಹಿಂದಿನ ಎರಡು ಪುಸ್ತಕಗಳನ್ನೂ ಕೊಳ್ಳಬೇಕಾದುದು ಅನಿವಾರ್ಯ. ಈ ಕೊಳ್ಳುವ ಕೆಲಸ ಅತಿ ಸುಲಭ. ನೀವು ಮಾಡಬೇಕಾದ್ದು ಇಷ್ಟೇ. ನಿಮ್ಮ ಮನೆ ಹತ್ತಿರ ಇರುವ ಪುಸ್ತಕದ ಅಂಗಡಿಗೆ ಹೋಗಿ. ಅಲ್ಲಿ ಈ ಸಂಭಾಷಣೆ ನಡೆಯುತ್ತದೆ.

ನೀವು : ನಮಸ್ಕಾರ ಪುಸ್ತಕದ ಅಂಗಡಿಯವರೇ.

ಪು.ಅ. : ನಮಸ್ಕಾರ ಜನ ಸಾಮಾನ್ಯರೇ.

ನೀವು : ನನಗೆ ವುಡ್‌ಹೌಸ್ ಮಹಾಶಯರು ಬರೆದಿರುವ ''ದ ಇನಿಮಿಟಬಲ್ ಜೀವ್ಸ್'' ಮತ್ತು ''ಕ್ಯಾರೀ ಆನ್ ಜೀವ್ಸ್'' ಪುಸ್ತಕಗಳು ಬೇಕು.

ಪು.ಅ. : ಖಂಡಿತವಾಗಿ, ಜನಸಾಮಾನ್ಯರೇ. ಇಲ್ಲಿ ಐದು ಷಿಲ್ಲಿಂಗ್ ಇಡಿ. ಹುಂ, ಇಗೋ ಇಲ್ಲಿವೆ, ನಿಮ್ಮ ಪುಸ್ತಕಗಳು.

ನೀವು : ವಂದನೆಗಳು ಪುಸ್ತಕದ ಅಂಗಡಿಯವರೇ.

ಪು.ಅ. : ವಂದನೆಗಳು ಜನಸಾಮಾನ್ಯರೇ.

ಇವೇ ಪುಸ್ತಕಗಳನ್ನು ನೀವು ಚೆನ್ನೈಯಲ್ಲಿ ಖರೀದಿಸಬೇಕು ಅಂತ ಇಟ್ಟುಕೊಳ್ಳಿ. ಆಗ, ನಿಮ್ಮ ಸಂಭಾಷಣೆ ಸ್ವಲ್ಪ ಬೇರೆಯ ರೀತಿಯಲ್ಲಿ ಆಗುವ ಸಾಧ್ಯತೆ ಇದೆ.

ನೀವು : ವಣಕ್ಕಣಂ, ಪುಸ್ತಗಂ ವಿರಕರಕ್ಕಾರರಿಕ್ಕು

ಪು.ವಿ. : ವಣಕ್ಕಂ. ನಿಂಬಳಿಕ್ಕು ಎನ್ನಾ ವೇಣುಂ?

ನೀವು : ನಮಕ್ಕು ವೋಡ್‌ಹೌಸ್ ಎಯ್ದಿರ್ಕ ''ಇನಿಮಿಟಬಳ್ ಜೀವ್ಸ್'' ತಿರುಂಬಿ ''ಕ್ಯಾರೀ ಆನ್ ಜೀವ್ಸ್'' ವೇಣುಂ.

ಪು.ವಿ. : ಕಂಟಿಪಾ ಕುಡುಕ್ಕರೆ ಸಾರ್. ಅಂಜ ಷಿಲ್ಲಿಂಗ್ ಇಂಗೆ ಕುಡುಂಗೋ. ಪಿನ್ನೆ ಇನ್ನೆನ್ನಾ ವೇಣುಂ?

ನೀವು : ವೆರಿಯವರೇ ಇನ್ನೋಣ್ಣೂ ವಾಂಡ. ಪುಸ್ತಗಂ ಮಟ್ಟುಂ ಕುಡುಂಗೋ.


ಪು.ವಿ. : ಕ್ಷಮಿಯುಮತ್ತೂರಿಯಿನ್ ನಲ್ಲ ಬನಿಯನ್ ವಂದಿರಕ್ಕರದು. ರೆಂಡು ಪೋಡಲಾಮಾ?

ನೀವು : ಕಂಡಿಪಾ ವಾಂಡ. ಆಂಡವನ್ ಪೇರಿಲೆ ನಂಬ ರೆಂಡು ಪುಸ್ತಗಂ ಮಟ್ಟುಂ ಕುಡುಂಗೋ.

ಪು.ವಿ. : ಎಡತ್ತುಕೊಂಗೋ. ವಣಕಂ.

ನೀವು : ವಣಕ್ಕಂ.

ಎರಡನೇ ಮಹಾ ಯುದ್ಧದ ಕಾಲದಲ್ಲಿ ವುಡ್‌ಹೌಸ್‌ನ ಜನಪ್ರಿಯತೆಗೆ ಧಕ್ಕೆ ತಗಲುವಂತಹ ಪ್ರಸಂಗವೊಂದು ಒದಗಿ ಬಂತು. ಹಿಟ್ಲರನ ಪಡೆಗಳು ಫ್ರಾನ್ಸ್ ದೇಶವನ್ನು ಆಕ್ರಮಿಸಿಕೊಂಡಾಗ ವುಡ್‌ಹೌಸ್ ಆಗ ಫ್ರಾನ್ಸ್‌ನಲ್ಲಿ ಇದ್ದುದರಿಂದ ಜರ್ಮನರ ಖೈದಿಯಾದ. ಜರ್ಮನರು ತಮ್ಮ ನಗೆಗಾರ ಖೈದಿಗೆ ಒಂದು ಷರತ್ತು ನೀಡಿದರು. ಬರ್ಲಿನ್ ರೇಡಿಯೋದಿಂದ ಹಾಸ್ಯ ಭಾಷಣಗಳನ್ನು ಮಾಡಲು ಒಪ್ಪಿದರೆ ಅವನಿಗೆ ಜೈಲಿನ ಬದಲು, ಮನೆಯಲ್ಲಿರುವ ಸ್ವಾತಂತ್ರ್ಯದ ಭರವಸೆ ಬಂತು. ಅಮಾಯಕನಂತೆ ವುಡ್‌ಹೌಸ್ ಇದಕ್ಕೆ ಒಪ್ಪಿ ತನ್ನ ಭಾಷಣ ಸರಣಿಯನ್ನು ಬಿತ್ತರಿಸಿದ. ಸ್ವಾಭಿಮಾನಿ ದೇಶಪ್ರೇಮಿ ಇಂಗ್ಲಿಷರಿಗೆ ಇದು ಅಕ್ಷಮ್ಯ ಅಪರಾಧದಂತೆ ಕಂಡಿತು. ತಮ್ಮ ಶತ್ರುವಿನೊಂದಿಗೆ ಸಹಕರಿಸಿದ ವುಡ್‌ಹೌಸ್‌ನನ್ನು ಬ್ರಿಟಿಷರು ಸಂಪೂರ್ಣವಾಗಿ ತಿರಸ್ಕರಿಸಿದರು. ಯುದ್ಧ ಮುಗಿದ ಮೇಲೂ ಬ್ರಿಟನ್ನಿನಲ್ಲಿ ಯಾರೂ ಅವನನ್ನು ಮಾತನಾಡಿಸಲಿಲ್ಲ. ವಿಧಿಯಿಲ್ಲದೆ ಅವನು ಅಮೆರಿಕಾಕ್ಕೆ ತೆರಳಿ ಅಲ್ಲಿನ ನಾಗರೀಕನಾದ. ಕಾಲಕ್ರಮೇಣ ಬ್ರಿಟಿಷರು ವುಡ್‌ಹೌಸ್ ಮೇಲಿನ ತಮ್ಮ ರೋಷವನ್ನು ಮರೆತರು. ಇಂಗ್ಲೆಂಡಿನ ಹಾಸ್ಯಪತ್ರಿಕೆಯಾದ ಪಂಚ್‌ನಲ್ಲಿ ವುಡ್‌ಹೌಸನ "America Today" ಅಂಕಣ ಮೂಡಿಬರಲು ಪ್ರಾರಂಭವಾಯಿತು. ವುಡ್‌ಹೌಸ್‌ನ ಹಾಸ್ಯದ ಹೊನಲು ಮತ್ತೆ ಭೋರ್ಗರೆಯಿತು.



ಅನೇಕ ರಾಷ್ಟ್ರಗಳ ನಗೆ ಸಾಹಿತಿಗಳು ವುಡ್‌ಹೌಸ್ ನಿಂದ ಪ್ರಭಾವಿತರಾಗಿದ್ದಾರೆ. ಹಾಸ್ಯ ಪರಂಪರೆಗೆ ದೇಶ ರಾಷ್ಟ್ರಗಳ ಮಿತಿ ಇಲ್ಲ. ಅದೊಂದು ಮೃದು ಮನೋಭಾವ. ಸುತ್ತಲಿನ ಪರಿಸರದ ಓರೆಕೋರೆಗಳಿಗೆ ನೋವಿನಿಂದ ಸ್ಪಂದಿಸಿ, ನೋವಿನ ಅಂಶವನ್ನು ನುಂಗಿ ನಗುವನ್ನು ಮಾತ್ರ ಹಂಚುವ ಬಾಧ್ಯತೆ ಹಾಸ್ಯಸಾಹಿತಿಯದು. ಈ ನಿಟ್ಟಿನಲ್ಲಿ ದಾರಿದೀಪವಾದ ವುಡ್‌ಹೌಸ್‌ಗೆ ಅಪರಂಜಿಯ ನಮನ.

ಬುಡಬುಡಿಕೆ ತತ್ವಪದ


- ಎನ್ ಪ್ರಕಾಶ

ತಾವು ಲೋಕದ ತಾವು, ಸಕಲ ಜೀವದ ಕಾವು
ತಾವು ನಲಿವಿನ ತಾವು, ಸಾವಿರದ ಇರವು

ತಾವು ಬಂದೀರಿ ಸ್ವಾಮಿ, ತಾವು ತಂದೀರಿ ಸ್ವಾಮಿ
ತಾವು ಉಳಿದೀರಿ ಸ್ವಾಮಿ, ತಮ್ಮೊಳಗೆ ತಾವು
ತಾವು ತಂದೀರಿ ಅಂತ ಚಂದ ಬಂದಾವು ನಾವು
ತಮ್ಮನರಿಯದ ನಾವು ಹೆಂಗೆ ಅರಿತಾವ ತಮ್ಮ ತಾವು

ತಾವು ತಂದಿರುವುದೆಲ್ಲ ತಮ್ಮ ತಮ್ಮದೆ ಅಂತ ಕಚ್ಚಾಡತಾವ ನಾವು
ಅರಿವು ಮರೆತಾವು, ಮರೆವು ಮೆರಿತಾವು, ಕಂಡು ನಕ್ಕೀರಿ ತಾವು
ತಮದ ಹಕ್ಕಿ ಬಡಿತಾವ ರೆಕ್ಕೆ ತಡಕಾಡತಾವ ಗ್ವಾಡಿ
ಹುಡುಕಾಡುತಾವ ಮಿಡುಕಾಡುತಾವ ಚಡಪಡಿಕಿ ಸದ್ದ ಮಾಡಿ

ಇನ್ನು ಸಾಕೋ ಯಪ್ಪಾ, ಈ ಸದ್ದಿನಾಟ ಮಾಡಬ್ಯಾಡ ಮಾಟ
ಕಳಿಯೊ ಲೋಕದಾ ಕಾಟ, ಕೂಡಿಸೊ ನಿನ್ನ ಕೂಟ, ಕಲಿಸೊ ಕರಗುವಾ ಪಾಠ
ಕರುಣೆ ತೋರಿಸೋ ಯಪ್ಪಾ, ಇರುಳ ಹರಿಸೋ ಯಪ್ಪಾ, ಖರೆ ಆಗ್ಯಾದ ತಪ್ಪ
ಎದಿಯ ಆಗಸದಾಗ ಮೂಡಿಸೊ ಮುಂಜಾವ ಚುಕ್ಕಿ, ಇಟಗೊಂಡು ಮಕ್ಕಳನ್ನು ಒಪ್ಪ



ಒಂದು ಬಹಿರಂಗ ಪತ್ರ

- ರಾಮನ್

ಕರ್ನಾಟಕ ಹಾಗೂ ತಮಿಳುನಾಡು ರಾಜ್ಯಗಳ ಜಂಟಿ ಮುಖ್ಯ (ಮೂರ್ಖ) ಮಂತ್ರಿ ತಿರು ವೀರಪ್ಪನ್‌ರವರಿಗೆ!!

ಸಪ್ರೇಮ, ಭಯ ಭಕ್ತಿ ಪೂರಕ ಸಾಷ್ಟಾಂಗ ನಮಸ್ಕಾರಗಳು.

ಮಹಾಸ್ವಾಮಿ, ತಾವು ಕಳೆದ ಇಪ್ಪತ್ತು ವರ್ಷಗಳಿಂದಲೂ ಕರ್ನಾಟಕ ಹಾಗೂ ತಮಿಳುನಾಡಿನ ಗೃಹ ಖಾತೆಗಳ ಆಡಳಿತವನ್ನು ತಮಿಳು ಭಾಷೆಯಲ್ಲೇ ನಡೆಸುತ್ತಾ, ನ್ಯಾಯಾಂಗದ ಕಲಾಪಗಳಲ್ಲಿಯೂ ತಮ್ಮ ದೀರ್ಘ ಹಸ್ತವನ್ನು ಚಾಚುತ್ತಾ, ಎಲ್ಲರ ಗೌರವ, ಆದರಗಳಿಗೆ ಪಾತ್ರರಾಗಿರುತ್ತೀರಿ. ನಿಮ್ಮ ಆಜ್ಞೆ ಮತ್ತು ಆದೇಶಗಳನ್ನು ನಮ್ಮೆರಡೂ ರಾಜ್ಯಗಳ ಪೋಲೀಸ್ ಅಧಿಕಾರಿಗಳು ನಮ್ರ ಸೇವಕರಂತೆ ಪಾಲಿಸುತ್ತಾ ಬಂದಿರುತ್ತಾರೆ. ಇತ್ತೀಚಿನ ವರುಷಗಳಲ್ಲಿ ನಿಮಗೆ ಸರ್ಕಾರಗಳಿಂದಲೂ ಕಪ್ಪ, ಕಾಣಿಕೆಗಳು ಸಲ್ಲುತ್ತಿವೆ ಎಂಬ ವಿಷಯ ತಿಳಿದಾಗಲಂತೂ ಅತೀವ ಸಂತಸವಾಯಿತು. ನೀವು ಹೇಳಿದಂತೆ ಪೋಲೀಸರು ಎಲ್ಲಾ ನ್ಯಾಯಾಲಯಗಳಲ್ಲಿ ಅರ್ಜಿಗಳನ್ನು ಸಲ್ಲಿಸುತ್ತಾ, ನ್ಯಾಯಾಧೀಶರುಗಳನ್ನು ತಲ್ಲಣಗೊಳಿಸುತ್ತಿದ್ದಾರೆ. ನಿಮಗೋಸ್ಕರ ಕಾನೂನು ಪಂಡಿತರು ವಿ.ಪಿ.ಸಿ. (ವಿರಪ್ಪನ್ ಪ್ರೊಸೀಜರ್ ಕೋಡ್) ಎಂಬ ಹೊಸ ಸಂಹಿತೆಯನ್ನು ರಚಿಸಲು ಮುಂದಾಗಿದ್ದು, ಇದಕ್ಕೆ ಭಾರತದ ಪಾರ್ಲಿಮೆಂಟ್ ಕೂಡ ಸಂಪೂರ್ಣ ಸಹಕಾರ ಕೊಡುವುದೆಂಬ ಭರವಸೆ ಕೊಡಲಿಚ್ಛಿಸುತ್ತೇನೆ. ನೀವೀಗ ಕೇವಲ ತಮಿಳು ಪ್ರತ್ಯೇಕತಾವಾದಿಗಳ ಸಹಾಯ ಪಡೆಯುತ್ತಿದ್ದು, ಅವರುಗಳು ಮಾತ್ರ ನಿಮ್ಮ ರಾಯಭಾರಿಗಳಾಗಲು ಅರ್ಹರೆಂದು ನೀವು ಭಾವಿಸಿರುವಂತೆ ಕಾಣುತ್ತಿದೆ. ಇದು ನಮ್ಮ ಕರ್ನಾಟಕದ ಜನತೆಗೆ ಮಾಡಿದ ದ್ರೋಹ ಎನ್ನದೆ ವಿದಿಯಿಲ್ಲ. ಇದೀಗ ನಮ್ಮ ಕರ್ನಾಟಕದಲ್ಲಿರುವ ಪ್ರತ್ಯೇಕ ಕೊಡಗು ರಾಷ್ಟ್ರಸೇನೆಯ ಕೆಲವು ಯೋಧರನ್ನು ನಿಮ್ಮ ರಾಯಭಾರಿಗಳಾಗಿ ಕಳುಹಿಸುವ ಒಂದು ಯೋಚನೆ (ಯೋಜನೆ)ಯನ್ನು ಕೊಡಗು ರಾಷ್ಟ್ರೀಯವಾದಿಗಳಿಗೆ ತಿಳಿಸುವ ಏರ್ಪಾಟು ಮಾಡಲಾಗುವುದು. ಹಾಗಾದಲ್ಲಿ, ನಮ್ಮ ಇತರೆ ಕನ್ನಡಿಗರಿಗೆ ಸ್ವಲ್ಪ ನೆಮ್ಮದಿ ತಂದೀತು.

ಇದೀಗ ಬಂದ ಸುದ್ದಿಯಂತೆ, ನಿಮ್ಮ ಬಳಿಗೆ ಒಂದು ಹೆಲಿಕಾಪ್ಟರ್ ಕಳುಹಿಸುವ ಆಲೋಚನೆಯನ್ನು ನಮ್ಮ ಸರ್ಕಾರ ಮಾಡುತ್ತಿರುವಂತಿದೆ. ಆ ಸಂದರ್ಭದಲ್ಲಿ ನಿಮಗೆ ಹಾಗು ನಿಮ್ಮ ಜತೆ ಇರುವ ಎಲ್ಲ ಕಾಡು ಪ್ರಾಣಿಗಳಿಗೆ ಆಗಬಹುದಾದ ತೊಂದರೆ ಬಗ್ಗೆ ನಮ್ಮೆಲ್ಲರ ಕನಿಕರವಿದೆ. ಆದರೂ ಎಲ್ಲರನ್ನೂ ಕ್ಷಮಿಸಿ, ನಿಮ್ಮ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಮುಂದುವರಿಸಿಕೊಂಡು ಹೋಗಿ ಎಂದು ಪ್ರಾರ್ಥಿಸುತ್ತಾ ಈ ಪತ್ರ ಮುಗಿಸುತ್ತಿದ್ದೇನೆ.

ಇಂತು ಒಬ್ಬ ಕನ್ನಡಿಗ

ಕಾದ ಹೆಂಚಿನ ದೋಸೆ

– ಹೆಚ್. ಗೋಪಾಲಕೃಷ್ಣ

ಇಲ್ಲಿ ಮರದಡಿಯಲ್ಲಿ
ಜನನಡೆವ ಹಾದಿ ಪಕ್ಕದಲಿ
ತೆಳು ಉರಿಯ ತವದಲ್ಲಿ
ಬೇಯುತಿದೆ ದೋಸೆ
ಹೊಟ್ಟೆಯಲಿ ಬಿದ್ದರೂ
ತಟ್ಟೆಯಲೇ ಇದ್ದರೂ
ಇನಿತಿಲ್ಲ ನೋವು ಅದಕೆ


ಏನು ಚೆಲುವಿನ ದೋಸೆ
ಎಂಥಾ ರುಚಿಯ ದೋಸೆ
ಅಂಗೈ ಅಗಲದ ಈ ದೋಸೆ

ಇರುಳ ತಾರೆಯ ಕಿಡಿಯು
ಕಾವಲಿ ಮೇಲೆ ಹರಡಿದಂತೆ
ಶ್ರಾವಣದ ಬಿಳಿ ಮೋಡದ
ಕಿರಿದಾದ ತುಣುಕಂತೆ
ಹಸುವಿನ ಕೆಚ್ಚಲೇ
ಕಾವಲಿಗೆ ಇಳಿದಂತೆ
ನಗುತಲಿದೆ ದೋಸೆ
ಬಾಳೆಲೆ ಅದಕೆ ಹಸೆ

ಇನ್ನೊಂದು ಚಣದಲ್ಲಿ
ಜನ ಪಡೆವ ತಟ್ಟೆಯಲಿ
ಬಾಯಾಘಾತಕೆ ಸಿಕ್ಕಿ
ಹಲ್ಲು ನಾಲಗೆ ಸೇರಿ ಅದ ಮುಕ್ಕಿ
ಮಾಯವಾಗಲಿಹುದು
ಆದರೂ ಲೆಕ್ಕಿಸದೆ
ಸಾವಿಗೆ ಶೋಕಿಸದೆ
ಎಳೆ ನಗೆಯ ಬೀರುತ
ಘಮಘಮಿಸುವುದು

ಅಳುತ ಸತ್ತರೆ ನರಕ
ನಗುತ ಸತ್ತರೆ ನಾಕ
ಅಳುವು ನಗುವು ಕೂಡಿದರೆ
ಅದೇ ದೋಸೆಯ ಲೋಕ
ಎಂಬ ತತ್ವವನೊರೆವ ದೋಸೆ ನೀನು
ಕಾದ ಹೆಂಚಿನ ಮೇಲಿನ
ತುಂಡು ಬಾನು!

(ಜೀಎಸ್ಸೆಸ್ ಅವರು ಕ್ಷಮಿಸಲಿ,
''ಹೂವು'' ಕವನದ ಕಾಪಿ)



ಕಳ್ಳನ ಕತೆ

- ಆನಂದ

ಅಮಾವಾಸ್ಯೆಯ ರಾತ್ರಿ. ಎಲ್ಲೆಡೆ ಕರಾಳತೆ. ಹೆಪ್ಪುಗಟ್ಟಿದ ಮೌನ. ಕಳ್ಳರಿಗೆ ಹೇಳಿ ಮಾಡಿಸಿದ ವಾತಾವರಣ ತಮ್ಮ ಕಸುಬಿಗೆ. ಆದರೆ ನಮ್ಮ ಕಳ್ಳನ ದುರಾದೃಷ್ಟ. ಸಂಪಾದನೆ ಇಲ್ಲದ ಸಬ್ ರಿಜಿಸ್ಟ್ರಾರ್‌ನಂತಿತ್ತು ಅವನ ಮುಖ. ಯಾವ ಮನೆಯನ್ನೂ ಪ್ರವೇಶಿಸಲಾಗಲಿಲ್ಲ. 'ವೃಥಾ ಅಲೆತ. ನಿರಾಶೆ. ಸಮಯ ವ್ಯರ್ಥ' ಎಂದು ನಿತ್ಯ ಭವಿಷ್ಯದಲ್ಲಿ ಬರೆದಂತಾಗಿತ್ತು ಅವನ ಸ್ಥಿತಿ. ಅಲೆದು, ಅಲೆದು ಸುಸ್ತಾಗಿ ಒಂದು ಮರದ ಕೆಳಗೆ ನಿದ್ದೆ ಹೋದ.

ಬೆಳಗಾಯಿತು. ಸೂರ್ಯದೇವನ ಕಿರಣಗಳು ಬಿಸಿ ಮುಟ್ಟಿಸಿದರೂ ಅವನಿಗೆಚ್ಚರವಿಲ್ಲ. ಅಂತಹ ಸುಖ ನಿದ್ರೆ. ದೇವೇಗೌಡರು ವೇದಿಕೆಯ ಮೇಲೆ ನಿದ್ರಿಸುವಂತೆ.

ಆಗೊಬ್ಬ ಕುಡುಕ ತೂರಾಡುತ್ತ ಬಂದ. ಅವನು ಬೆಳಿಗ್ಗೆಯೇ ಔಟ್. ನಿದ್ರಿಸುತ್ತಿದ್ದ ಕಳ್ಳನನ್ನು ನೋಡಿದ. 'ಅರೆ ಇವನು ನನ್ನ ಗುರುವಿನಂತೆ ತೋರುತ್ತೆ. ಅದೆಷ್ಟು ಕುಡಿದನೋ ಏನೋ ರಾತ್ರಿ. ಇನ್ನೂ ಎದ್ದಿಲ್ಲ. ಥೇ. ಈ ಜನಗಳಿಗೆ ಮಿತಿಯೇ ತಿಳಿದಿಲ್ಲ' ಎಂದು ಗೊಣಗಿ ತೂರಾಡುತ್ತಲೇ ಜಾಗ ಖಾಲಿ ಮಾಡಿದ.

ಕುದುರೆ ಪ್ರಿಯನೊಬ್ಬ ಆ ಕಡೆ ಬಂದ. ಮಲಗಿದ್ದ ನಮ್ಮ ಕಥಾನಾಯಕನತ್ತ ದೃಷ್ಟಿ ಬೀರಿದ. ಪಾಪ. 'ನಿನ್ನೆ ಇಡೀ ದಿನ ಜೂಜಾಡಿ ಎಲ್ಲ ಹಣ ಕಳೆದುಕೊಂಡಿರಬಹುದು. ಹೆಂಡತಿ ಮನೆಯೊಳಗೆ ಸೇರಿಸಲಿಲ್ಲ ಎಂದು ಕಾಣುತ್ತೆ. ಅದಕ್ಕೇ ಇಲ್ಲಿ ಬಿದ್ದುಕೊಂಡಿದ್ದಾನೆ' ಎಂದು ಪ್ರತಿಕ್ರಿಯಿಸಿ ನಿರ್ಗಮಿಸಿದ.

ಇನ್ನಷ್ಟು ಸಮಯ ಕಳೆದು, ಬಿಸಿಲು ಹೆಚ್ಚಾದರೆ ನಮ್ಮ ಕಥಾ ನಾಯಕನಿಗೆ ಎಚ್ಚರ ಆಗಲಿಲ್ಲ. ಶಾಲೆಗೆ ಹೋಗುವ ಮಕ್ಕಳು ಜಮಾಯಿಸಿ ವಾಹನಕ್ಕೆ ಕಾಯತೊಡಗಿದಂತೆ ಗದ್ದಲ ಎಬ್ಬಿಸತೊಡಗಿದರು. ಆಗ ದಾರಿ ಹೋಕರೊಬ್ಬರು ಮಕ್ಕಳೇ, ಗದ್ದಲ ಮಾಡಬೇಡಿ. ಇಲ್ಲಿ ಯಾರೋ ಮಲಗಿದ್ದಾರೆ. ಅವರಿಗೆ ತೊಂದರೆ ಆಗತ್ತೆ' ಎಂದು ಮಕ್ಕಳಿಗೆ ಸೂಚನೆ ನೀಡಿದರು.

ಕಳ್ಳನೊಬ್ಬ ಆ ಕಡೆ ಬಂದ. ನಮ್ಮ ಕಥಾನಾಯಕನತ್ತ ದೃಷ್ಟಿ ಬೀರಿ 'ನನ್ನಂತೆ ಕಳ್ಳ ಅಂತ ಕಾಣುತ್ತೆ. ರಾತ್ರಿಯಿಡೀ ಪ್ರಯತ್ನಿಸಿದರೂ ಏನೂ ಸಿಗದೆ ನಿರಾಶನಾಗಿ ಮಲಗಿದ್ದಾನೆ ಪಾಪ' ಎಂದು ಹೇಳಿ ಹೋದ.

ನೀತಿ: ಏಕಂ ಸತ್ ವಿಪ್ರಾ ಬಹು ವದಂತಿ!

★★★

ಪರೀಕ್ಷೆಗಳು

– ನೀರಗುಂದ ಕೇಶವಮೂರ್ತಿರಾವ್

ಇತ್ತೀಚೆಗೆ ದಿನ ಪತ್ರಿಕೆಯ 'ಜನನಾಡಿ' ವಿಭಾಗದಲ್ಲಿ ಓದುಗರೊಬ್ಬರು 'ಪರೀಕ್ಷೆ ಬೇಕೇ ಬೇಕು' ಎಂಬ ಪತ್ರವನ್ನು ಬರೆದಿದ್ದರು. ಅದರಲ್ಲಿ ''ಶಾಲಾ ಮಕ್ಕಳ ಮಾನಸಿಕ ಒತ್ತಡ ಕಡಿಮೆ ಮಾಡುವ ದಿಶೆಯಲ್ಲಿ ವಾರ್ಷಿಕ ಪರೀಕ್ಷೆ ನಡೆಸುವುದನ್ನು ನಿಲ್ಲಿಸಬೇಕೆಂದು ಸರ್ಕಾರ ಆಲೋಚಿಸುತ್ತಿದೆ ಎಂದು ಶಿಕ್ಷಣ ಸಚಿವರು ಇತ್ತೀಚೆಗೆ ಇಂಗಿತ ವ್ಯಕ್ತಪಡಿಸಿ''ದ ಸುದ್ದಿಗೆ ಸಂಬಂಧಿಸಿದಂತೆ ಬರೆದ ಈ ಪತ್ರವನ್ನು ಓದಿದಾಗ ಪರೀಕ್ಷೆಯ ನಾನಾ ಮುಖಗಳು ಗೋಚರವಾಗತೊಡಗಿದುವು!

ಈ ಪರೀಕ್ಷೆಗಳು ಕೇವಲ ವಿದ್ಯಾರ್ಥಿಗಳಿಗಷ್ಟೇ ಸೀಮಿತವಲ್ಲ. ಮಾನವನಾಗಿ ಜನಿಸಿದವರೆಲ್ಲರೂ ತಮ್ಮ ಜೀವಿತಾವಧಿಯಲ್ಲಿ ಅನೇಕ ಪರೀಕ್ಷೆಗಳನ್ನು ಎದುರಿಸಲೇಬೇಕಾಗುತ್ತದೆ.

ನಮ್ಮ ಪೌರಾಣಿಕ ಯುಗದ ಮಹಾ ಮಹಿಮರು ಎದುರಿಸಿದ ಪರೀಕ್ಷೆಗಳೇನು ಸಾಮಾನ್ಯವೆ? ಶ್ರೀರಾಮನಂಥ ಅಪ್ಪಟ ಅಕ್ಕಸಾಲಿ ಸೀತಾದೇವಿಯನ್ನು ಅಗ್ನಿ ಪರೀಕ್ಷೆಗೊಳಪಡಿಸಿದ ನಂತರವೇ ಅಪ್ಪಟ ಚಿನ್ನವೆಂದು ಒಪ್ಪಿದ್ದಲ್ಲವೆ? ಹರಿಶ್ಚಂದ್ರ ಮಹಾರಾಜ ಅನೇಕ ಪರೀಕ್ಷೆಗಳನ್ನು ಎದುರಿಸಿ 'ಸತ್ಯವಂತ'ನೆಂಬ ಸರ್ಟಿಫಿಕೇಟ್ ಪಡೆದ ಕತೆ ಎಲ್ಲರೂ ಬಲ್ಲವರು. ವಿಶ್ವಾಮಿತ್ರರಂಥ ಋಷಿಗಳು ಬ್ರಹ್ಮರ್ಷಿಯಾಗಬೇಕಾದರೆ ಅವರೆದುರಿಸಿದ ಪರೀಕ್ಷೆಗಳು ಅದಕ್ಕೆ ಅಪ್ಸರ ಸ್ತ್ರೀಯರಿಂದುಂಟಾದ ಕಿರುಕುಳಗಳು ಸಾಮಾನ್ಯವೆ!

ಭಕ್ತನನ್ನು ತನ್ನ ವಿವಿಧ ಪರೀಕ್ಷೆಗೊಳಪಡಿಸಿ, ಪಬ್ಲಿಕ್ ಪರೀಕ್ಷೆಗಳಲ್ಲಿ ಮೇಲ್ಮಟ್ಟದ ದರ್ಜೆಯಲ್ಲಿ ಪಾಸು ಮಾಡಿಸಿದ ಭಗವಂತನ ಮಹಿಮೆಗಳು ಅಪಾರ. ''ನರ-ಹರಿಯುವಂತೆ ಕೂಗಿದರೂ ಧ್ವನಿ ಕೇಳ''ದಂತೆ ಕನಕದಾಸರನ್ನು ಸತಾಯಿಸಿ ಕೊನೆಗೆ ದರ್ಶನವಿತ್ತ ಕಾಗಿನೆಲೆಯ ಕೇಶವನ ಪರೀಕ್ಷೆಯಲ್ಲಿ ಗೆದ್ದ ದಾಸರು 'ಕನಕ ವರೇಣ್ಯ'ರೆಂದು ಡಿಗ್ರಿ ಪಡೆದರು. ಪ್ರೇಮ ಪರೀಕ್ಷೆಯಲ್ಲಿ ಗೆದ್ದ 'ಮಲುಹಣ-ಮಲುಹಣಿ'ಯನ್ನು ಮರೆಯದವರಾರು?

ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ಮಾರ್ಚ್-ಸೆಪ್ಟೆಂಬರ್ ಮಾಹೆಗಳಲ್ಲಿರುವಂತೆ ಒಬ್ಬೊಬ್ಬರಿಗೂ ತಮ್ಮದೇ ಆದ ಪರೀಕ್ಷಾ ಸಮಯಗಳುಂಟು. ಕೆಲವು ವೇಳೆ ಇದಕ್ಕೆ ಯಾವುದೇ ಸಮಯಾ ಸಮಯವಿಲ್ಲ! ಈಗ ನೀವು ಸುಮ್ನೆ ರಸ್ತೇಲಿ ನಡೀತಿರುವಾಗ ಕಿಡಿಗೇಡಿ ಹುಡುಗನೊಬ್ಬ ''ಅಂಕಲ್ ಟೈಮೆಷ್ಟು?'' ಎಂದು ಕೇಳಿದರೆ ಸಾಕು. ನೀವು ಪರೀಕ್ಷಾ ಹಾಲಿನಲ್ಲಿ ವಿದ್ಯಾರ್ಥಿಯೊಬ್ಬ ಪ್ರಶ್ನೆ ಪತ್ರಿಕೆಯ ಗೊಂದಲದಲ್ಲಿ ಬಿದ್ದಂತೆ ವಿಲಿವಿಲಿ ಒದ್ದಾಡುತ್ತೀರಿ! ಇದಕ್ಕೆ ಉತ್ತರಿಸುವ ಮುನ್ನ ನೀವು ಕೈ ಗಡಿಯಾರ ಕಟ್ಟಿರಬೇಕು. ಮುಂದೋಳು ಮಡಚಿ, ಕೈ ಮೇಲೆತ್ತಿ (ಈಚಿನ ವಾಚ್‌ಗಳನ್ನು ಕಿವಿಯ ಹತ್ತಿರ ಹಿಡಿಯುವ

ಸಮಸ್ಯೆ ಆಷ್ಟಾಗಿ ಇರುವುದಿಲ್ಲ) ಕಣ್ಣಿನ ಹತ್ತಿರ ತಂದು (ಕೆಲವು ವೇಳೆ ಕನ್ನಡಕ ಧರಿಸಿ)... ಇಷ್ಟೆಲ್ಲಾ ಸಿದ್ಧರಾಗುವ ಹೊತ್ತಿಗೆ 'ಟೈಂ' ಕೇಳಿದ ಕಿಡಿಗೇಡಿ ನಾಪತ್ತೆ! ಆ ಘಳಿಗೆ ನಿಮಗೆ ಪರೀಕ್ಷೆಯಲ್ಲಿ 'ನಾಪಾಸಾ'ದೆನೆಂದು ಅನಿಸಿರಲಿಕ್ಕೂ ಸಾಧ್ಯ!

ಮನೆಯ ಮಡದಿಯರಿಗಂತೂ ದ್ರೌಪದಿಗೆ ಆದಂತೆ 'ದೂರ್ವಾಸ ಪರೀಕ್ಷೆ' ಒಮ್ಮೊಮ್ಮೆ ಎದುರಿಸಬೇಕಾಗುತ್ತದೆ. ''ಇವತ್ತು ಎಲ್ಲಾರ್ದು ಊಟ ಆಗಿ ಒಂದು ತುತ್ತು ಅನ್ನ ಒಂದ್ ಸೌಟು ಸಾರು ಸಹ ಇಲ್ಲಲ್ಲ. ''ಪರೀಕ್ಷೆ'' ಮಾಡ್ದಂಗೆ ಊರ್‍ನಿಂದ ಸಮ್ನೋದ್ರುತ್ತೆ, ಮಾವ ಬಂದ್ಬಿಟ್ರೇಡೋದೆ?...'' ಎಂದು ಪಕ್ಕದ್ಮನೆ ಪದ್ಮನ ಶೈಲಿ ಸಂಜೆ ಮಹಿಳಾ ಕಾರ್ಯಕ್ರಮದಲ್ಲಿ ಹೇಳ್ತಿರೋದ್ನ ಪತಿ ದೇವರುಗಳು ಕೇಳಿರಬಹುದು!

ನನ್ನಂಥವರಿಗೆ ಎದುರಾಗುವ ಆರ್ಥಿಕ ಪರೀಕ್ಷೆಗಳು ಸರ್ವೆ ಸಾಮಾನ್ಯ. ಇದ್ದಕ್ಕಿದ್ದಂತೆ ಸಾಲ್ಗಾರ ಸೋಮಯ್ಯ ಬಂದು (ಅವ್ನಿಗೆ ಸಾಲ ಕೇಳುವುದೇ ಹಾಬಿ) ''ಸರ್ ಅರ್ಜೆಂಟಾಗಿ ಒಂದ್ಸಾವಿರ ರೂ. ಇದ್ರೆ ಕೊಡಿ ನಾಳೆ ಗ್ಯಾರಂಟಿ...'' ಎನ್ನುತ್ತಾನೆ. ಇಂಥಹ ಪರೀಕ್ಷೆಗಳಲ್ಲಿ ನಾನು ಪಾಸಾದ ಸಂದರ್ಭವೇ ಇಲ್ಲ. ನನ್ನ ಗೋಳಿನ, ಕಷ್ಟ ಸುಖದ, ತೊಂದ್ರೆ ತಾಪತ್ರಯಗಳ ಕ(ಕಂ)ತೆಗಳನ್ನು ಕೇಳುತ್ತ, ಮನಸ್ಸಿನಲ್ಲೇ ಖುಷಿಪಡುತ್ತ ಸೋಮಯ್ಯ ಕೊನೆಗೆ ''ಎಷ್ಟಿದ್ರೆ ಅಷ್ಟೇ ಕೊಡಿ'' ಎಂದಾಗಲೂ ನನಗೆ ಇದು ಕಠಿಣ ಪರೀಕ್ಷೆಯೇ ಆಗಿರುತ್ತದೆ!

ತಾಳ್ಮೆಯ ಸತ್ವ ಪರೀಕ್ಷೆಯನ್ನು ''ದೊನ್ನೆಗಳ ಹರಹಿ ಬಾಳೆಲೆ ಹಾಳೆಯಂ ಹಾಕಿ'' ಅದರ ಮೇಲೆ ಬಗೆ ಬಗೆಯ ಮೃಷ್ಟಾನ್ನ ಭಕ್ಷ್ಯ ಭೋಜ್ಯಗಳನ್ನು ಬಡಿಸುವವರೆಗೂ (ಈಗಿನ ಭೋಜನ ಸಮಾರಂಭಗಳಲ್ಲಿ ಬಡಿಸುವ ಮೊದಲೇ ತಿನ್ನುವವರಿಗೆ ಇದು ಅನ್ವಯಿಸುವುದಿಲ್ಲ!) ಕಾಯ್ದು ''ಜನ್ನಿವಾರಮಂ ಮೇಲೆತ್ತಿ ತಲೆಸುತ್ತು ಮಂ ತೆಗೆದು ಸಡಿಲಿಸಿ ಧೋತ್ರಮಂ। ಚೆನ್ನಾಗಿಯಾಪೋಷಣಮನೆತ್ತಿ''ದ ನಂತರ (ಮೂರನೆಯ ಮಂಗರಸ) ಊಟ ಮಾಡುವವರಲ್ಲಿ ಕಾಣಬಹುದು.

'ವಧೂ ಪರೀಕ್ಷೆ'ಯ ವಿಚಾರ ಇಂದಿಗೂ ಮಹತ್ವದ್ದೆ. ''ಅನರ್ಥಕೋಶ''ದ ಕರ್ತೃ ನಾ. ಕಸ್ತೂರಿಯವರ ಮಾತಿನಲ್ಲೇ ಹೇಳಬೇಕೆಂದರೆ; ''ವಧೂ ಪರೀಕ್ಷೆ - ಇದನ್ನು ಸಮರ್ಪಕರಾಗಿ ಯಾವ ತರುಣನೂ ಮಾಡಲರಿಯ, ಸಂದೇಹವಿದ್ದರೆ ಇತರರ ಪತ್ನಿಯರನ್ನೆಲ್ಲಾ ನೋಡಿ'' ಎನ್ನುತ್ತಾರೆ.

'ವಧೂ ಪರೀಕ್ಷೆ'ಯಲ್ಲಿ ಸಾಮಾನ್ಯವಾಗಿ ''A ಯಿಂದ F'' ವರೆಗೂ ಕಡ್ಡಾಯವಾಗಿ ಉತ್ತರಿಸಲೇಬೇಕು. ಅಂದರೆ: A-Age, B-Beauty, C-Caste/Character, D-Dignity, E-Education/Employment, F-Financial.... ಹೀಗೆ ಎಲ್ಲದಕ್ಕೂ ಸಮರ್ಪಕವಾದ ಉತ್ತರವಿದ್ದಲ್ಲಿ ಪರೀಕ್ಷೆಯಲ್ಲಿ ಪಾಸು ಕಟ್ಟಿಟ್ಟ ಬುತ್ತಿ!

ಪರೀಕ್ಷೆ ತನ್ನ ಕಬಂಧ ಬಾಹುವನ್ನು ಎಲ್ಲೆಡೆ ಚಾಚಿ ಎಲ್ಲರನ್ನೂ ಪರೀಕ್ಷೆಗೆ ಗುರಿಪಡಿಸುತ್ತದೆ. ಇತ್ತೀಚಿನ ದಿನಗಳಲ್ಲಿ ದಿನ ಬಳಕೆಯ ವಸ್ತುಗಳಲ್ಲಿಯೂ ಸಹ ''ಒಮ್ಮೆ ಪರೀಕ್ಷಿಸಿ...'' ಇತ್ಯಾದಿ ಜಾಹಿರಾತು, ಎಚ್ಚರಿಕೆಯ ಸೂಚನೆಗಳನ್ನು ಕಾಣಬಹುದು.

ನಮ್ಮ ರಾಜಕಾರಣಿಗಳು ಐದು ವರ್ಷಗಳಿಗೊಮ್ಮೆ ಎದುರಿಸಬೇಕಾದ ''ಚುನಾವಣಾ ಪರೀಕ್ಷೆ''ಯ ಕುರಿತು ಬಣ್ಣಿಸಲಸದಳವಲ್ಲ!

ಮುಖ್ಯವಾಗಿ ಇಂದು ಮಕ್ಕಳಿಂದ ಮುದುಕರಾದಿಯಾಗಿ ಎಲ್ಲರೂ ವೈದ್ಯರ ಸಲಹೆಯಂತೆ ಕಾಲಕಾಲಕ್ಕೆ 'ವೈದ್ಯ ಪರೀಕ್ಷೆ'ಗಳನ್ನು ಮಾಡಿಸಿಕೊಂಡರೆ ಆರೋಗ್ಯವಾಗಿರಬಹುದು.

ಕೊನೆಯದಾಗಿ ಇಂದಿನ ಪರೀಕ್ಷೆಗಳು, ಫಲಿತಾಂಶಗಳು ಬಂದ ನಂತರ ವಿದ್ಯಾರ್ಥಿಗಳ ಪ್ರತಿಕ್ರಿಯೆಗಳು ಇವನ್ನೆಲ್ಲ ಸುದ್ದಿ ಮಾಧ್ಯಮಗಳಲ್ಲಿ ಕಂಡು ಓದಿದಾಗ ''ಅತಿ ಬುದ್ಧಿವಂತನೂ ಉತ್ತರಿಸಲಾಗದಂತಹ ಪ್ರಶ್ನೆಗಳನ್ನು ಮಹಾ ಮೂರ್ಖನೂ ಕೇಳಬಹುದಾದ್ದರಿಂದ, ಬಲು ಚೆನ್ನಾಗಿ ಸಿದ್ಧವಾಗಿರುವವನಿಗೂ ಪರೀಕ್ಷೆಗಳು ದುಃಸಾಧ್ಯ'' ಎಂಬ ("Examinations are formidable even to the best prepared, for the greatest fool may ask more than the wisest man can answer") ಕೋಲ್ಟನ್ನನ ಉಕ್ತಿ ನೆನಪಿಗೆ ಬರುತ್ತದೆ.

ವಧು ಪರೀಕ್ಷೆ - ಇದನ್ನು ಸಮರ್ಪಕವಾಗಿ ಯಾವ ತರುಣನೂ ಮಾಡಲರಿಯ... ಸಂದೇಹವಿದ್ದರೆ - ಇತರರ ಪತ್ನಿಯರನ್ನೆಲ್ಲ ನೋಡಿ - (ನಾ. ಕಸ್ತೂರಿ)



Haasya Brahma Trust

Koravanji Aparanji Trust

Present



Scintillating P.G. Wodehouse

at

Ganjam Mantapa

(84, Bull Temple Road,
Bangalore - 19 Ph.: 6610539)

at 10:30 a.m. on Sunday, 14th Sept. 2003

Speakers:

Dr. Vimala Rama Rao,
Chairman, Dept. of English, Bangalore University

Prof. H.K. Ramachandra Murthy


Dr. Om Prakash

Prof. A.R. Mitra *will preside*

All are Cordially invited

Sponsors: GANJAM & PRISM

Wodehouse Books by PRISM
Credit Cards welcome


STRIKE POWER
Down Hole Hammers
&
Button Bits

Reg. No.: CPMG/KA/BGW-544/2003-05

Printed by V.R NATH for the Publisher KORAVANJI APARANJI TRUST. Published by KORAVANJI APARANI TRUST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010. Editor : M. SHIVAKUMAR